# ಡಾ. ಎಂ. ಎಸ್. ಲಠ್ಠೆ

## ವ್ಯಕ್ತಿ ಪರಿಚಯ



ಡಾ. ವೀರಣ್ಣ ದಂಡೆ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧೭

# ಡಾ। ಎಂ.ಎಸ್. ಲಠ್ಠೆ

## ವ್ಯಕ್ತಿ ಪರಿಚಯ

**ಡಾ। ವೀರಣ್ಣ ದಂಡೆ**
ಪ್ರಾಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

**ಕರ್ನಾಟಕ ಜಾನಪದ ಪರಿಷತ್ತು**
**ನಂ.1, ಜಲದರ್ಶಿನಿ ಲೇಔಟ್,**
**ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,**
**ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054**

**DR. M.S. LATTHE -**
A pen portrait - by DR. VEERANNA DANDE.
Published by : KARNATAKA JANAPADA PARISHATHU.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalooru - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

**ಹಕ್ಕುಗಳು ಲೇಖಕರಿಗೆ ಸೇರಿವೆ**

<u>ಗ್ರಂಥ ಪ್ರಕಟಣ ಸಲಹಾ ಸಮಿತಿ</u>

| | |
|---|---|
| ನಾಡೋಜ ಡಾ. ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀ ಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ. ಎಂ.ಎ. ಜಯಚಂದ್ರ | ಸದಸ್ಯರು |
| ಪ್ರೊ. ಡಿ. ಲಿಂಗಯ್ಯ | ಸಂಪಾದಕರು |
| ಡಾ. ಚಕ್ಕೆರೆ ಶಿವಶಂಕರ್ | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು : ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ। ವೀರಣ್ಣ ದಂಡೆ** ಅವರು **ಡಾ। ಎಂ.ಎಸ್. ಲಠ್ಠೆ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧-೦೩-೨೦೦೮

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಡಾ। ಎಂ.ಎಸ್.ಲಠ್ಠೆ

**ಜನನ ಮತ್ತು ಕೌಟುಂಬಿಕ ಜೀವನ :** ಡಾ। ಲಠ್ಠೆ ಅವರು ಬೆಳಗಾಂವ ತಾಲೂಕಿನ ಮುತನಾಳ ಗ್ರಾಮದವರು. ತಂದೆ ಶಿವಪ್ಪ, ತಾಯಿ ಬಸಮ್ಮ. ಇವರದು ಒಕ್ಕಲುತನದ ಮನೆತನ. ಮನೆಯಲ್ಲಿ ಹಿರಿಯ ಮಗನಾಗಿ ದಿ. ೧೨.೪.೧೯೩೨ ರಂದು ಜನಿಸಿದರು. ಅವರಿಗೆ ಮೂವರು ಸಹೋದರಿಯರು, ನಾಲ್ಕು ಜನ ಸಹೋದರರು. ತಂದೆ ಶಿವಪ್ಪ ಅವರು ತೀರಿಕೊಂಡ ನಂತರ ಸಹೋದರಿಯರ ಮತ್ತು ಸಹೋದರರ ವಿದ್ಯಾಭ್ಯಾಸ, ಮದುವೆ ಇತ್ಯಾದಿಗಳನ್ನು ತಾವೇ ನಿಂತು ನೆರವೇರಿಸಿ, ಒಬ್ಬ ಹಿರಿಯನ ಜವಾಬ್ದಾರಿಯನ್ನು ನಿಭಾಯಿಸಿದರು.

ಶ್ರೀಮತಿ ಚೆನ್ನಾಂಬಿಕಾ ಅವರು ಡಾ। ಲಠ್ಠೆ ಅವರ ಧರ್ಮಪತ್ನಿ. ಶ್ರೀಮತಿ ವಿಜಯಲಕ್ಷ್ಮಿ, ಶ್ರೀಮತಿ ಶೈಲಜಾ ಎಂಬ ಇಬ್ಬರು ಹೆಣ್ಣುಮಕ್ಕಳು, ಶ್ರೀ ರವೀಂದ್ರ ಎಂಬ ಒಬ್ಬ ಪುತ್ರ.

**ವಿದ್ಯಾಭ್ಯಾಸ :** ಎಂ.ಎಸ್. ಲಠ್ಠೆಯವರ ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಾದ ಮುತನಾಳದಲ್ಲಿಯೇ ಆಯಿತು. ಮಾಧ್ಯಮಿಕ ವಿದ್ಯಾಭ್ಯಾಸ ಹಿರೇಬಾಗೇವಾಡಿಯಲ್ಲಿ ಮುಗಿಸಿದರು. ಬಾಲ್ಯದ ಈ ಶಿಕ್ಷಣ ಪಡೆಯುವಲ್ಲಿ ಮಲ್ಲಿಕಾರ್ಜುನ ಲಠ್ಠೆ ಅವರು ಯಾವಾಗಲೂ ಮುಂದಿರುತ್ತಿದ್ದರು. ಯಾವಾಗಲೂ ವರ್ಗದ ಹಿರೇಮಣಿ ಇವರೇ ಆಗಿರುತ್ತಿದ್ದರು. ಶಿಕ್ಷಕರು ಬರದಿದ್ದಾಗ ಲಠ್ಠೆ ಅವರೇ ತಾವಿದ್ದ ವರ್ಗದ ಕ್ಲಾಸುಗಳನ್ನು ತೆಗೆದುಕೊಳ್ಳುತ್ತಿದ್ದರಂತೆ.

ಮಾಧ್ಯಮಿಕ ಶಿಕ್ಷಣ ಮುಗಿದ ನಂತರ ಆರ್ಥಿಕ ಅಡಚಣೆಯಿಂದಾಗಿ ಮುಂದೆ ಕಲಿಸಲು ಅವರ ತಂದೆಯವರು ಹಿಂದೇಟು ಹಾಕಿದರು. ಆದರೆ

ಮಲ್ಲಿಕಾರ್ಜುನ ಅವರಿಗೆ ತಾನು ಮುಂದೆ ಓದಬೇಕು, ಬೆಳಗಾವಿಗೆ ಹೋಗಿ ಹೈಸ್ಕೂಲ್ ಸೇರಬೇಕು ಎಂಬ ಆಲೋಚನೆ ಇತ್ತು. ಕೊನೆಗೆ ಬೆಳಗಾವಿಯ ಜಿ.ಎ.ಹೈಸ್ಕೂಲಿನಲ್ಲಿ ಹೆಸರನ್ನು ನೊಂದಾಯಿಸಿಕೊಂಡರು. ಇವರನ್ನು ಮುತನಾಳದ ವಿಠ್ಠಲ ಕುಲಕರ್ಣಿ ಅವರು ಕರೆದುಕೊಂಡು ಹೋಗಿ ಆ ಹೈಸ್ಕೂಲಿನ ಪ್ರಿನ್ಸಿಪಾಲರಾದ ಬಿ.ಬಿ.ಮಮದಾಪೂರ ಅವರನ್ನು ಭೇಟಿ ಮಾಡಿಸಿ, ಇವರ ಪರಿಸ್ಥಿತಿಯನ್ನು ವಿವರವಾಗಿ ತಿಳಿಸಿದರು. ಪ್ರಿನ್ಸಿಪಾಲರ ಸಹಾಯದಿಂದ ಲಠ್ಠೆ ಅವರಿಗೆ ಸ್ಕಾಲರ್‌ಶಿಪ್ ದೊರೆಯುವಂತಾಯಿತು. ಶಾಲೆಯ ಫೀ ಕೂಡ ಮಾಫಿಯಾಯಿತು. ಹೀಗಾಗಿ ಅತ್ಯಂತ ಆಸಕ್ತಿಯಿಂದ ಓದಿ ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿದರು.

ಹೈಸ್ಕೂಲ್ ಶಿಕ್ಷಣ ಮುಗಿದ ನಂತರ ಮಲ್ಲಿಕಾರ್ಜುನ ಅವರ ತಂದೆಯವರು ಮುಂದೆ ಓದುವುದು ಬೇಡವೆಂದರು. ಇವರೇ ಹಿರಿಯ ಮಗನಾದುದರಿಂದ ಒಕ್ಕಲುತನ ಮಾಡಲಿ ಎಂಬ ಬಯಕೆ ಅವರದಾಗಿತ್ತು. ಆದರೆ ಮತ್ತೆ ಮಗನ ಹಠ ಕಂಡು ಕಾಲೇಜಿಗೆ ಕಳಿಸಲು ತಂದೆಯವರು ತಯಾರಾದರು. ಒಂದು ಪುಕ್ಕಟೆ ಕೋಣೆಯ ವ್ಯವಸ್ಥೆಯಾಯಿತು. ಟ್ಯೂಶನ್ ಹೇಳಿ ಉಳಿದ ವ್ಯವಸ್ಥೆ ಮಾಡಿಕೊಳ್ಳಲು ಮನಸ್ಸುಮಾಡಿದರು. ಇಡೀ ಕಾಲೇಜಿನ ವಿದ್ಯಾಭ್ಯಾಸ ಮುಗಿಯುವವರೆಗೆ ಒಂದೇ ಹೊತ್ತು ಊಟ ಮಾಡುತ್ತಿದ್ದುದನ್ನು ಢಾ. ಲಠ್ಠೆ ಅವರು ತಮ್ಮ ಜೀವನ ವೃತ್ತಾಂತದಲ್ಲಿ ನಮೂದಿಸಿದ್ದಾರೆ.

ಕಾಲೇಜಿನ ಜೀವನದಲ್ಲಿ ಅತ್ಯಂತ ಜಾಣ ವಿದ್ಯಾರ್ಥಿಯಾಗಿ ಅವರು ಹೆಸರು ಮಾಡಿದರು. ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ, ಒಳ್ಳೆಯ ಭಾಷಣಕಾರರಾಗಿ, ನಾಟಕಗಳಲ್ಲಿ ಭಾಗವಹಿಸಿ ನಟರಾಗಿ, ಕನ್ನಡ ಚಳುವಳಿಗಳಲ್ಲಿ ಮುಂದಾಳತ್ವವಹಿಸಿ, ಕಾಲೇಜಿನ ಬೆಸ್ಟ್ ಸ್ಟುಡೆಂಟ್ ಎಂದು ಆಯ್ಕೆಯಾಗಿ– ಹೀಗೆ ನಾನಾ ತರದಲ್ಲಿ ವಿದ್ಯಾರ್ಥಿ ಮಲ್ಲಿಕಾರ್ಜುನ ಲಠ್ಠೆ ಅವರು ಹೆಸರುವಾಸಿಯಾಗಿದ್ದರು. ಹೀಗೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುತ್ತಲೇ ೧೯೫೫ರಲ್ಲಿ ಬಿ.ಎ. ಪಾಸಾದರು.

ಬಿ.ಎ.ಪಾಸಾದ ಕೂಡಲೇ ಜಿ.ಎ.ಹೈಸ್ಕೂಲಿನಲ್ಲಿ ಕೆಲಸಕ್ಕೆ ಸೇರಿದರು. ಪೂನಾ ವಿಶ್ವವಿದ್ಯಾಲಯದ ಕನ್ನಡ ಪಿ.ಜಿ. ಕೋರ್ಸ್, ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ನಡೆಯುತ್ತಿತ್ತು. ಡಾ. ಲಠ್ಠೆ ಅವರು ಎಂ.ಎ. ಓದಿಗಾಗಿ ತಮ್ಮ ಹೆಸರನ್ನು ವಿಲ್ಲಿಂಗ್ಡನ್ ಕಾಲೇಜಿನಲ್ಲಿ ನೊಂದಾಯಿಸಿಕೊಂಡರು. ಅಲ್ಲಿ ರಂ.ಶ್ರೀ.ಮುಗಳಿ ಅವರು ಅವರಿಗೆ ಗುರುಗಳಾಗಿ ದೊರೆತರು. ವಾರಕ್ಕೆ ಶನಿವಾರ ಮತ್ತು ರವಿವಾರ ಎರಡು ದಿನ ಮಾತ್ರ ಕ್ಲಾಸುಗಳು ನಡೆಯುತ್ತಿದ್ದವು. ಹೀಗೆ ಎಂ.ಎ. ಪದವಿಯನ್ನು ೧೯೬೧ರಲ್ಲಿ ಪಡೆದರು.

ಮುಂದೆ **'ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮ'** ವಿಷಯ ಕುರಿತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ಡಾ. ಆರ್.ಸಿ. ಹೀರೇಮಠ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ೧೯೭೦ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದರು.

**ಸೇವೆ :** ಡಾ. ಲಠ್ಠೆ ಅವರ ಪರಿಸ್ಥಿತಿಯನ್ನು ಅರಿತಿದ್ದ ಶ್ರೀ ವೀರಪ್ಪಣ್ಣ ಉಪ್ಪಿನ ಅವರು ಲಠ್ಠೆ ಅವರು ಬಿ.ಎ.ಪಾಸಾದ ಕೂಡಲೇ ಕೆ.ಎಲ್.ಇ. ಸಂಸ್ಥೆಯ ಜಿ. ಎ. ಹೈಸ್ಕೂಲ್‌ನಲ್ಲಿ ಶಿಕ್ಷಕ ಹುದ್ದೆಯನ್ನು ದೊರಕಿಸಿ ಕೊಟ್ಟರು (೧೯೫೯). ೧೯೬೧ರಲ್ಲಿ ಎಂ.ಎ.ಪಾಸಾದ ಕೂಡಲೇ ಕೆ.ಎಲ್.ಇ. ಸಂಸ್ಥೆಯ ಜೆ.ಟಿ.ಕಾಲೇಜು ಗದಗನಲ್ಲಿ ಕನ್ನಡ ಅಧ್ಯಾಪಕರೆಂದು ಸೇವೆಗೆ ಸೇರಿದರು. ೧೯೬೪ರಲ್ಲಿ ನಿಪ್ಪಾಣಿಯ ಕಾಲೇಜಿಗೆ ವರ್ಗವಾಗಿ ಹೋದರು. ಅಲ್ಲಿಯೇ ೧೯೭೧ರ ವರೆಗೆ ದುಡಿದರು.

೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಹುದ್ದೆಗೆ ಅರ್ಜಿ ಹಾಕಿದರು. ಆಗ ಅವರು ಕರ್ನಾಟಕ ಕಾಲೇಜಿಗೆ ಅಧ್ಯಾಪಕರೆಂದು ಆಯ್ಕೆಯಾದರು. ಅಲ್ಲಿಗೆ ಹೋಗಿ ೧೫.೬.೧೯೭೨ರಂದು ಹಾಜರಾದರು. ಮುಂದೆ ಎರಡ್ಮೂರು ತಿಂಗಳುಗಳಲ್ಲಿ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರಕ್ಕೆ ಆಯ್ಕೆಯಾಗಿ ೧೮. ೮. ೧೯೭೨ ರಲ್ಲಿ ಕಲಬುರ್ಗಿ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗಕ್ಕೆ ಬಂದು ಸೇರಿದರು. ಇಲ್ಲಿ

ಮುಂದೆ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೨. ೪. ೧೯೯೨ ರಂದು ನಿವೃತ್ತರಾದರು. ನಿವೃತ್ತಿಯ ನಂತರ ಪ್ರಸಾರಾಂಗದ ನಿರ್ದೇಶಕರಾಗಿ, ಬಸವಾದಿ ಶರಣಸಾಹಿತ್ಯ ಕೇಂದ್ರದ ಪ್ರಾಧ್ಯಾಪಕರಾಗಿ ನಿಷ್ಠೆಯಿಂದ ಸೇವೆಸಲ್ಲಿಸಿದರು.

**ಸಾಮಾನ್ಯರಲ್ಲಿ ಪ್ರಸಿದ್ಧಿ ಪಡೆದ ವಿದ್ವಾಂಸ :** ಡಾ। ಎಂ.ಎಸ್. ಲಠ್ಠೆ ಅವರು ಕಲಬುರ್ಗಿಗೆ ಬಂದಾಗ, ಕನ್ನಡ ಅಧ್ಯಯನ ಸಂಸ್ಥೆ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಅದು ಅದೇ ಆಗ ಪ್ರಾರಂಭವಾಗಿ ಒಂದು ವರ್ಷ ಮಾತ್ರವಾಗಿತ್ತು. ಆಗಿನ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗವಾಗಿದ್ದ ಕನ್ನಡ ವಿಭಾಗ, ಈಗಿನ ಕ್ಯಾಂಪಸ್‌ಗೆ ಬಂದದ್ದು ಮರುವರ್ಷವೇ, ೧೯೭೩ರಲ್ಲಿ. ಡಾ।ಲಠ್ಠೆ ಅವರ ವ್ಯಕ್ತಿತ್ವದ ಪ್ರಭಾವ ಬೀರಲು ಪ್ರಾರಂಭವಾದ ವರ್ಷವದು.

ವಿದ್ವಾಂಸರಾಗಿ ಕಲಬುರ್ಗಿಯ ಸಾಮಾನ್ಯರ ಸಂಪರ್ಕಕ್ಕೆ ಬಂದವರಲ್ಲಿ ಡಾ। ಲಠ್ಠೆ ಅವರು ಮೊದಲಿಗರು. ಅವರ ಈ ಜನಸಾಮಾನ್ಯರೊಂದಿಗೆ ಬೆರೆಯುವ ಗುಣ, ಅವರಿಗೆ ಅಪಾರ ಕೀರ್ತಿಯನ್ನು ತಂದು ಕೊಟ್ಟಿತು. ಇದರಿಂದ ಲಠ್ಠೆ ಅವರಿಗೆ ಕಲಬುರ್ಗಿ ನಾಗರಿಕರಿಂದ ಅದ್ಭುತವಾದ ಮರ್ಯಾದೆ ದೊರೆಯಿತು. ಡಾ। ಲಠ್ಠೆ ಅವರು ಸರಳ ಸ್ವಭಾವದವರು, ಸಜ್ಜನರು ಎಂಬ ಮಾತುಗಳು ಬರೀ ಹೊಗಳಿಕೆಗಳಲ್ಲ. ಅಕ್ಷರಶಃ ಅವರಿಗೆ ಕೀರ್ತಿತಂದ ಅಪರೂಪದ ಗುಣಗಳವು.

**ಮನುಷ್ಯತ್ವವೆಂಬ ಬೆಳಕಿನ ಕಂಬ :** ಡಾ। ಲಠ್ಠೆ ಅವರಲ್ಲಿದ್ದ ಮನುಷ್ಯತ್ವವನ್ನು ಪ್ರೀತಿಸುವ ಗುಣ, ಜಾತ್ಯಾತೀತ ಭಾವನೆ, ಮಾನವೀಯ ಅಂತಃಕರಣ ಅಪರೂಪದವು. ಅನೇಕ ಸಲ ಅಸ್ಪೃಶ್ಯ ಕಲಾವಿದರನ್ನು ಮನೆಗೆ ಕರೆಸಿ, ಜನಪದ ಸಾಹಿತ್ಯ ಸಂಗ್ರಹಿಸುವ ಪ್ರಸಂಗಗಳು ಬಂದದ್ದುಂಟು. ಆ ಕಲಾವಿದರಲ್ಲಿ ಕಿಂಚಿತ್ತೂ ಅನ್ಯಭಾವನೆ ಬರದಂತೆ ನಡೆದುಕೊಳ್ಳುವ ಅವರ ವರ್ತನೆ ಅಪರೂಪದ್ದು.

**ಸದುವಿನಯದ ಸಾಕಾರ :** ಡಾ। ಲಠ್ಠೆ ಅವರು ಕಿರಿಯರನ್ನು ಗೌರವಿಸುವ, ಸಮಾನ ವಯಸ್ಕರಲ್ಲಿ ಎಂದೂ ವಿರಸ ಸಾಧಿಸದ, ಸಾಮಾನ್ಯರಲ್ಲಿ

ಸಾಮಾನ್ಯನಾಗಿ ಬದುಕಿದ ಸರಳ, ಸಜ್ಜನ, ಸದುವಿನಯದ ಶಿಕ್ಷಕರು. ತಾವು ಬೆಳೆಯುವುದಲ್ಲದೆ ವಿದ್ಯಾರ್ಥಿಗಳನ್ನೂ ಜನಸಾಮಾನ್ಯರನ್ನೂ ಪ್ರೋತ್ಸಾಹಿಸುವ, ಬರವಣಿಗೆಯಲ್ಲಿ ತೊಡಗಿಸುವ, ಓದಲು ಪ್ರೇರೇಪಿಸುವ ಗುಣ ಅವರದಾಗಿತ್ತು.

**ಪರಕೀಯನಲ್ಲದ ಇವ ನಮ್ಮವ :** ಕಲಬುರ್ಗಿಗೆ ಬಂದ ನಂತರ ತಾವು ಬೇರೆಡೆಯಿಂದ ಬಂದವರು ಎಂಬ ಭಾವವನ್ನು ಇಟ್ಟುಕೊಳ್ಳದೆ ಕಲಬುರ್ಗಿಯ ಜನತೆಯ ಜೊತೆಗೆ ಬೆರೆಯಲು ಪ್ರಾರಂಭಿಸಿದರು. ಅವರು ಆಸಕ್ತಿಹೊಂದಿದ ಶರಣಸಾಹಿತ್ಯ ಮತ್ತು ಜನಪದಸಾಹಿತ್ಯ ಕ್ಷೇತ್ರಗಳು ಸಂಪೂರ್ಣವಾಗಿ ಕಲಬುರ್ಗಿಯವರಾಗಿ ಬೆಳೆಯಲು ಸಹಕಾರಿಯಾದವು.

**ಮೌಖಿಕ ಪರಂಪರೆಯ ಆಯ್ಕೆ :** ೧೯೭೦ರ ಪ್ರಾರಂಭದ ವರ್ಷಗಳಲ್ಲಿಯೇ ಕರ್ನಾಟಕದ ತುಂಬ ಜನಪದ ಸಾಹಿತ್ಯದ ಅಭ್ಯಾಸ ಪ್ರಾರಂಭವಾಗಿತ್ತು. ಡಾ। ಬಿ.ಬಿ.ಹೆಂಡಿ ಅವರ ಸಲಹೆಯ ಮೇರೆಗೆ ಡಾ। ಲಠ್ಠೆ ಅವರು ಜಾನಪದ ಕ್ಷೇತ್ರದಲ್ಲಿ ದುಡಿಯಲು ಸಂಕಲ್ಪ ಮಾಡಿದರು. ೧೯೭೩ನೇ ಇಸ್ವಿ ಡಾ। ಹೆಂಡಿ ಅವರ ಜೊತೆಗೂಡಿ, ಗಾದೆಗಳ ಸಂಗ್ರಹಕ್ಕೆ ತೊಡಗಿದರು. ಜೊತೆಯಲ್ಲೇ ವೈಯಕ್ತಿಕವಾಗಿ ಒಗಟು ಮತ್ತು ಒಡಪುಗಳ ಸಂಗ್ರಹ ಕೂಡ ಮಾಡಿದರು. ೧೯೭೪ರ ಪ್ರಾರಂಭದ ತಿಂಗಳುಗಳಲ್ಲಿ ಈ ಮೂರೂ ಸಂಗ್ರಹಗಳನ್ನು ಸಂಪಾದಿಸಿ, ಒಮ್ಮೆಲೇ ಪ್ರಕಟನೆಗೆ ಕಳಿಸಿದರು. ಆ ವರ್ಷದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಅವರ ಒಡಪುಗಳ ಸಂಗ್ರಹಕ್ಕೆ ಲಭಿಸಿತು. ಇದು ಅವರಲ್ಲಿ ಜನಪದ ಸಾಹಿತ್ಯದಲ್ಲಿ ಕೆಲಸ ಮಾಡಲು ಇನ್ನಷ್ಟು ಆಸಕ್ತಿಯನ್ನು ಹುಟ್ಟಿಸಿತು.

**ಎದ್ದುಕಾಣುವ ವೈಯಕ್ತಿಕ ಕೆಲಸ :** ೧೯೭೫ರಲ್ಲಿ ಡಾ। ಹೆಂಡಿ ಅವರು **'ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಗ್ರಹ ಯೋಜನೆ'** ಯೊಂದನ್ನು ಯುಜಿಸಿಯಿಂದ ಪಡೆದಾಗ, ಆ ಯೋಜನೆಯಲ್ಲಿ ಡಾ। ಲಠ್ಠೆ ಅವರನ್ನು ತೊಡಗಿಸಿಕೊಂಡರು. ಹೀಗೆ ಈ ಯೋಜನೆಯಲ್ಲಿ ಸಂಗ್ರಹ ಮಾಡುತ್ತಲೇ ಡಾ। ಲಠ್ಠೆ ಅವರು ವೈಯುಕ್ತಿಕವಾಗಿಯೂ ಜನಪದ ಸಾಹಿತ್ಯ ಸಂಗ್ರಹದ ಕೆಲಸವನ್ನು

ಮುಂದುವರೆಸಿದರು. ಇಡೀ ಉತ್ತರಕರ್ನಾಟಕದಲ್ಲಿ, ೧೯೭೦ರ ವರ್ಷಗಳಲ್ಲಿ ವೈಯಕ್ತಿಕವಾಗಿ ಬಹುದೊಡ್ಡ ಪ್ರಮಾಣದಲ್ಲಿ ಜನಪದ ಸಾಹಿತ್ಯ ಸಂಗ್ರಹ, ಸಂಶೋಧನೆ ಮತ್ತು ಪ್ರಕಟನೆಗಳನ್ನು ಮಾಡಿದರು.

**ಜಾನಪದ ಕ್ಷೇತ್ರದ ಗಮನಾರ್ಹ ಸಂಶೋಧಕ :** ಕಲಬುರ್ಗಿಯಿಂದ ಕರ್ನಾಟಕದ ಬೇರೆ ಬೇರೆ ತುದಿಯವರೆಗೆ ಪರಿಚಯದ ಜನ, ವಿದ್ವಾಂಸರು ಡಾ। ಲಠ್ಠೆ ಅವರನ್ನು ಜನಪದ ಸಂಗ್ರಾಹಕರೆಂದು ಗುರುತಿಸುವುದನ್ನು ಕಾಣುತ್ತೇವೆ. ಅವರು ಜಾನಪದ ಕ್ಷೇತ್ರದಲ್ಲಿ ಮಾಡಿದ ಸಂಶೋಧನೆಗಳನ್ನು ಸರಿಯಾಗಿ ಗುರುತಿಸುವ ಕೆಲಸ ಇನ್ನೂವರೆಗೆ ನಡೆದಿಲ್ಲವೆಂದೇ ಹೇಳಬೇಕು. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸವನ್ನು ವೈಯಕ್ತಿಕ ಮಟ್ಟದಲ್ಲಿ ಪ್ರಾರಂಭಿಸಿದವರೆಂದರೆ ಡಾ। ಲಠ್ಠೆ ಅವರು ಎಂಬುದರಲ್ಲಿ ಎರಡುಮಾತಿಲ್ಲ. ೧೯೭೩ರಲ್ಲಿ ಪ್ರಾರಂಭವಾದ ಅವರ ಕ್ಷೇತ್ರಕಾರ್ಯದ ಕೆಲಸ ನಿರಂತರವಾಗಿ ಹತ್ತು ವರ್ಷಗಳವರೆಗೆ, ಅಂದರೆ ೧೯೮೨ರ ವರೆಗೆ ನಡೆದಿದೆ. ಹತ್ತು ವರ್ಷಗಳ ಅವಧಿಯಲ್ಲಿ ಅವರು ವಿಶೇಷವಾಗಿ ಕಲಬುರ್ಗಿ, ಬೆಳಗಾಂವ, ಜೊತೆಗೆ ಉತ್ತರಕರ್ನಾಟಕದ ಬಹುತೇಕ ಭಾಗದ ಹಳ್ಳಿಹಳ್ಳಿಗಳನ್ನು ತಿರುಗಾಡಿದ್ದಾರೆ. ಹಾಡುವ ಜನಪದ ಕಲಾವಿದರನ್ನು, ಹಾಡು ಸೃಜಿಸುವ ಜನಪದ ಕವಿಗಳನ್ನು ಗುರುತಿಸಿದ್ದಾರೆ. ಈ ಕವಿ ಮತ್ತು ಕಲಾವಿದರಿಂದ ಮೌಖಿಕ ಸಾಹಿತ್ಯವನ್ನು ಮತ್ತು ಇತರ ಸಾಂಸ್ಕೃತಿಕ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ವಿಶೇಷವಾಗಿ ಬಹುಮುಖ ಪ್ರತಿಭಾವಂತರಾದ ಕವಿಗಳನ್ನು ಗುರುತಿಸಿ ಅವರ ಬದುಕನ್ನು ದಾಖಲಿಸುವ ಕೆಲಸವನ್ನು ಮಾಡಿದ್ದಾರೆ. ಇದು ಡಾ। ಲಠ್ಠೆ ಅವರ ಕ್ಷೇತ್ರಕಾರ್ಯಕ್ಕೆ, ಸಂಶೋಧನಾ ಪ್ರವೃತ್ತಿಗೆ, ಶೋಧನ ಕೆಲಸಕ್ಕೆ ಹಿಡಿದ ಕನ್ನಡಿಯಾಗಿದೆ.

**ಭಿನ್ನವಾಗಿರುವ ಮೌಖಿಕ ಸಾಹಿತ್ಯ ಸಂಶೋಧನೆಯ ಸ್ವರೂಪ :** ಕೇವಲ ಲಿಖಿತಮೂಲದ ಕವಿಗಳನ್ನು, ಸಾಹಿತ್ಯವನ್ನು ಶೋಧಮಾಡುವ ಸಂಶೋಧನೆಯ ಸ್ವರೂಪವನ್ನು ಓದಿ, ಅದರ ಕಲ್ಪನೆಯನ್ನು ಮಾತ್ರ ಹೊಂದಿರುವ ಶಿಷ್ಟಸಾಹಿತ್ಯದ

ಓದುಗರಿಗೆ ಡಾ। ಲಠ್ಠೆ ಅವರ ಕೆಲಸಗಳ ಮಹತ್ವ ಗೊತ್ತಾಗುವುದಿಲ್ಲ. ಒಂದು ಶಾಸನ ಇಲ್ಲಿದೆ ಎಂದು ಯಾರೋ ಹೇಳಿದ್ದನ್ನು/ ತೋರಿಸಿದ್ದನ್ನು ನೋಡಿದವ, ಒಂದು ತಾಡೋಲೆಯ ಗಂಟನ್ನು ಬಿಚ್ಚಿನೋಡಿದವ, ಒಬ್ಬ ಕವಿಯ ಸಮಾಧಿಯನ್ನು ಕಂಡುಬಂದವ, ಸಂಶೋಧಕನೆಂಬ ಪುಣ್ಯಕ್ಕೆ ಪಾತ್ರನಾಗುತ್ತಾನೆ. ಡಾ। ಲಠ್ಠೆ ಅವರು ಶೋಧಮಾಡಿದ್ದು, ಸಂಪರ್ಕಮಾಡಿದ್ದು–ಕಲ್ಲು, ತಾಡೋಲೆ, ಕಾಗದಗಳಂಥ ನಿರ್ಜೀವ ವಸ್ತುಗಳೊಂದಿಗಲ್ಲ. ಬದಲಾಗಿ ಜೀವಂತವಾದ ಮಾನವ ಶಿಲೆಗಳೊಂದಿಗೆ. ಕಣ್ಣಿಗೆ ಕಾಣುವ ಕೈಗೆ ಸಿಗುವ ವಸ್ತುಗಳೊಂದಿಗಲ್ಲ, ಕಣ್ಣಿಗೆ ಕಾಣದ, ಕೈಗೆ ಸಿಗದ, ಅರ್ಥಮಾಡಿಕೊಳ್ಳಲು ಸಾಧ್ಯವಾಗದ, ನಿರಾಕಾರವಾದ ಮಾನವ ಮನಸ್ಸುಗಳೊಂದಿಗೆ.

**ಜನಪದ ಕವಿ–ಕಾವ್ಯಗಳ ಸಂಶೋಧನೆ :** ಡಾ। ಲಠ್ಠೆ ಅವರಿಗೆ ಜನಪದ ಕವಿ–ಕಲಾವಿದರೆಂದರೆ ಅಚ್ಚುಮೆಚ್ಚು. ಜನಪದ ಪ್ರತಿಭಾವಂತರ ಸೃಷ್ಟಿಯಾದ ಸಾಹಿತ್ಯ ಮತ್ತು ಕಲೆಗಳಷ್ಟೇ ಅವರ ಜೀವನದ ಬಗೆಗೆ ಲಠ್ಠೆ ಅವರಿಗೆ ಕುತೂಹಲ. ಹೀಗಾಗಿ ಅವರಲ್ಲಿರುವ ಸಂಶೋಧಕ ಮನಸ್ಸು ನಮಗೆ ಕಾಣುವುದು ಜೀವಂತ ಕವಿಗಳನ್ನು ಕಾಣುವಲ್ಲಿ.

**ಕವಿಗಳ ಶೋಧ ನಡೆಸಿದ ಒಂದೆರಡು ಉದಾಹರಣೆಗಳು :** ಕಲಬುರ್ಗಿಯ ಜಿಲ್ಲೆಯ ತುಂಬ ಜನಪದ ಕವಿಗಳನ್ನು ಹುಡುಕಿಕೊಂಡು ಹೋದಾಗಲೆಲ್ಲ ಡಾ। ಲಠ್ಠೆ ಅವರ ಜೊತೆಗೆ ಇದ್ದವ ನಾನು. ಆ ಬಗೆಗಿನ ಒಂದೆರಡು ಉದಾಹರಣೆಗಳನ್ನು ಇಲ್ಲಿ ವಿವರಿಸಲು ಬಯಸುತ್ತೇನೆ. ಸಾವಳಗಿ ಮಹಮ್ಮದ ಸಾಹೇಬ ಅವರ ಹೆಸರನ್ನು ಕೇಳಿದ ಡಾ। ಲಠ್ಠೆ ಅವರು ಸಾವಳಗಿಗೆ ಹೋಗಿ ಮಹಮ್ಮದಸಾಹೇಬನನ್ನು ನೋಡಿ ಬರುವಾ, ಅವನ ಮಾಹಿತಿ ಪಡೆದು ಬರುವಾ ಎಂದು ಉತ್ಸುಕರಾದರು. ಒಂದು ರವಿವಾರ (ಸುಮಾರಾಗಿ ರಜಾ ದಿನಗಳಲ್ಲಿ ಅವರು ಕ್ಷೇತ್ರಕಾರ್ಯಕ್ಕೆ ಹೋಗುವುದು ವಾಡಿಕೆಯಾಗಿತ್ತು), ಸಾವಳಗಿಗೆ ರೈಲು ಮುಖಾಂತರ ಹೋಗಲು ನಿರ್ಧರಿಸಿ, ಸ್ಟೇಷನ್‌ಗೆ ಹೋಗಿ ರೇಲ್ವೆ ಹತ್ತಿದೆವು. ಸಾವಳಗಿ ಸ್ಟೇಷನ್‌ಗೆ ಹೋಗಿ ಮುಟ್ಟಿದೆವು. ಅಲ್ಲಿಂದ

ಸಾವಳಗಿ ಊರೊಳಗೆ ಪ್ರವೇಶವಾಗುವುದು ಆ ಊರಿನ ಹರಿಜನ ಕೇರಿಯೊಳಗಿಂದ. ಅಲ್ಲೆಲ್ಲ ವಯಸ್ಸಾದ ಹೆಣ್ಣುಮಕ್ಕಳು ನೆರೆದು ಕುಳಿತಿದ್ದರು. ನಾವು ಮಹಮ್ಮದಸಾಬನ ಪರಿಚಯ, ಅವನ ಮನೆ ಕೇಳಿದೆವು. ನಿಮಗೆ ಹಾಡು ಬರುವುದಾದರೆ ಹಾಡಿರಿ ಎಂದೆವು. ಅವರು ಸೋಬಾನ, ಕುಬ್ಬಸ, ಜೋಗುಳ ಮುಂತಾದ ಹೆಣ್ಣುಮಕ್ಕಳ ಹಾಡುಗಳ ಧಾಟಿಗಳಲ್ಲಿ ಅಂಬೇಡಕರ, ಗಾಂಧೀಜಿ ಇವರ ಹಾಡುಗಳನ್ನು ಹಾಡಿದ ನೆನಪು.

ಡಾ। ಲಠ್ಠೆ ಅವರಿಗೆ ಆಶ್ಚರ್ಯ. ಅಂಬೇಡಕರ ವಿಷಯಕ ಹಾಡುಗಳನ್ನು ಹೆಣ್ಣುಮಕ್ಕಳ ಸಂಪ್ರದಾಯದ ಹಾಡುಗಳ ಧಾಟಿಯಲ್ಲಿ ಹಾಡಲು ಹೇಗೆ ಸಾಧ್ಯ? ಎಂದು. ಕೆದಕಿ ಕೇಳಿದಾಗ, ಜಂಬಗಿ ಶರಣ ಎನ್ನುವ ಒಬ್ಬ ದೊಡ್ಡಕವಿಗಳಿದ್ದಾರೆ. ಅವರು ಈ ಹಾಡುಗಳನ್ನು ರಚನೆ ಮಾಡಿದ್ದಾರೆ, ನಾವು ಕಲಿತು ಹಾಡುತ್ತೇವೆ ಎಂದರು. ಜಂಬಗಿ ಶರಣ ಎಲ್ಲಿ ಭೇಟಿಯಾಗುತ್ತಾರೆ? ಎಂಬುದು ಡಾ। ಲಠ್ಠೆ ಅವರ ಕುತೂಹಲದ ಪ್ರಶ್ನೆ. ಅವರ ಜೀವನದ ಬಗೆಗೆ ಒಂದಿಷ್ಟು ವಿವರಗಳನ್ನು ಹೇಳಿದ ಅವರು, ಈಗ ಆ ಕವಿಗಳು ಇರುವುದು, ಗುಲಬರ್ಗಾದ ನಗರಪಾಲಿಕೆ ಕಚೇರಿ ಎದುರಿಗಿನ ಒಂದು ಸಣ್ಣ ಗುಡಿಯಲ್ಲಿ ಎಂದರು. ಆಗ ಲಠ್ಠೆ ಅವರು ನಗರಸಭೆ ಎದುರಿಗಿನ ಕಕ್ಕೇರಿ ಚಾಳದ ಒಂದು ಬಾಡಿಗೆಯ ಮನೆಯಲ್ಲಿ ಇರುತ್ತಿದ್ದರು. ಅವರಿಗೆ ಕುತೂಹಲ. 'ನಮ್ಮ ಮನೆಯ ಮಗ್ಗುಲಲ್ಲಿಯೇ ಜಂಬಗಿ ಶರಣ ದೊರೆಯುತ್ತಾರೆ' ಎಂದು. ಜಂಬಗಿ ಶರಣನನ್ನು ಕಲಬುರ್ಗಿಯಲ್ಲಿ ಭೇಟಿಯಾಗುವುದೆಂದು ನಿರ್ಧರಿಸಿದರು.

ಮತ್ತೆ ನಾವು ಮಹಮ್ಮದ ಸಾಹೇಬನ ಕಡೆ ಹೊರಟೆವು. ಸಣ್ಣ ಮನೆ. ಮಹಮ್ಮದ ಸಾಬನಿಗೆ ಆಗಲೇ ವಯಸ್ಸಾಗಿತ್ತು, ಶಕ್ತಿಹೀನನಾಗಿದ್ದ. ಅವನ ಶಿಷ್ಯರು ಅನೇಕ ಜನ ಕೂಡಿದರು. ಅವನ ಹಾಡುಗಳನ್ನು ಹಾಡಿದರು. ಮಾಹಿತಿ ಹೇಳಿದರು. ಅವನ್ನೆಲ್ಲ ಟಿಪ್ಪಣಿ ಮಾಡಿಕೊಂಡು ಹಿಂತಿರುಗಿ ಕಲಬುರ್ಗಿಗೆ ಬಂದು ಇಳಿದೆವು.

ಮರುದಿನ ಡಾ। ಲಠ್ಠೆ ಅವರಿಗೆ ಜಂಬಗಿ ಶರಣನನ್ನು ಕಾಣಬೇಕೆಂಬ ಕುತೂಹಲ. ನಗರಸಭೆಯ ಎದುರಿಗೆ ಇರುವ ಸಣ್ಣ ಎಲ್ಲಮ್ಮನ ಗುಡಿಯ ಸುತ್ತ ಹಲವಾರು ಜನ ಕಾವಿಧಾರಿಗಳು ಇರುವುದನ್ನು ಕಂಡರು. ಜಂಬಗಿ ಶರಣ ಇಲ್ಲೇಕೆ ಇರುತ್ತಾನೆ? ಎಂಬ ಪ್ರಶ್ನೆ ಡಾ। ಲಠ್ಠೆ ಅವರಿಗೆ ಕಾಡತೊಡಗಿತು. ಏನೇ ಆಗಲಿ ಆ ಗುಡಿಯಲ್ಲಿರುವ ಕಾವಿಧಾರಿಗಳಿಗೆ ಹೋಗಿ ಮಾತನಾಡಿಸೋಣ ಎಂಬುದು ಅವರ ಹಂಬಲ. ಅದನ್ನು ಬರುವ ರವಿವಾರ ಮಾಡೋಣವೆಂದು ತೀರ್ಮಾನ ವಾಯಿತು. ರವಿವಾರ ಇಬ್ಬರೂ ಕೂಡಿ ಆ ಗುಡಿಗೆ ಹೋದೆವು. ಶರಣನನ್ನು ಕೇಳಿ ಪರಿಚಯ ಮಾಡಿಕೊಂಡೆವು. ಜಂಬಗಿ ಶರಣ ಆ ಕಾವಿಧಾರಿಗಳಲ್ಲೇ ಒಬ್ಬರಾಗಿದ್ದರು. ಡಾ। ಲಠ್ಠೆ ಅವರು ಅವರಿಗೆ ಮನೆಗೆ ಬರಲು ಕೇಳಿಕೊಂಡರು. ಕವಿಗಳು ಆಗಲಿ ಎಂದರು.

ಮನೆಯಲ್ಲಿ ಧ್ವನಿಮುದ್ರಣ ಯಂತ್ರವನ್ನು ತೆರೆದು ಮುಂದಿಟ್ಟು ಒಂದು ಹಾಡನ್ನು ಹಾಡಲು ಹೇಳಿದರು. ಶರಣ ಹಾಡಿದರು. ಅದನ್ನು ಹಚ್ಚಿ ತೋರಿಸಿದಾಗ, ಕವಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಚಪ್ಪಾಳೆ ತಟ್ಟಿ, ಕುಣಿದು ಹಾರಾಡಿದ ನೆನಪು ನನ್ನ ಕಣ್ಣ ಮುಂದೆ ಇನ್ನೂ ಇದೆ. ಅಂದು ಅವರಿಗೆ ಲಠ್ಠೆ ಗುರುಗಳ ಮನೆಯಲ್ಲಿ ಮೃಷ್ಠಾನ್ನ ಭೋಜನ. ತೀರ ಭೌಳೇ ಸ್ವಭಾವದ ಸಹಜ ಶರಣ ಕವಿಗೆ ಅದೆಲ್ಲ ಆಶ್ಚರ್ಯ, ಸಂತೋಷ.

ಸಾವಳಗಿ ಮಹಮ್ಮದಸಾಹೇಬರನ್ನು, ಜಂಬಗಿ ಶರಣರನ್ನು ಗುರುತಿಸಿ ಜಾನಪದ ಲೋಕಕ್ಕೆ ಪರಿಚಯ ಮಾಡಿದ್ದು ಒಂದು ಚಾರಿತ್ರಿಕ ಸತ್ಯ ಸಂಗತಿ. ಇಂದು ಜಂಬಗಿ ಶರಣನ ಸಾಹಿತ್ಯವೆಲ್ಲ ಹೊರಬಂದು ಪ್ರಕಟವಾಗುತ್ತಿದೆ. ಅದಕ್ಕಿಂತ ಮುಂಚೆ ಜಂಬಗಿ ಶರಣ ಯಾರು ಎಂಬುದು ಕಲಬುರ್ಗಿಯ ಸಾಹಿತ್ಯಾಸಕ್ತರಿಗೆ ಪರಿಚಯ ಇರಲಿಲ್ಲ. ಮಹಮ್ಮದ ಸಾಬನ ಕಥೆಯೂ ಅಷ್ಟೇ. ಇಂದು ಮಹಮ್ಮದ ಸಾಬನ ಸಾಹಿತ್ಯವನ್ನು ಕುರಿತು ಪ್ರತ್ಯೇಕ ಪಿಎಚ್.ಡಿ. ಅಧ್ಯಯನವಾಗಿರುವುದು ಇಲ್ಲಿ ಉಲ್ಲೇಖನೀಯ.

ಇಂತಹ ಇನ್ನೂ ಹಲವಾರು ಜನ ಕವಿಗಳನ್ನು ಹುಡುಕಿಕೊಂಡು ಹೋದ ನಿದರ್ಶನಗಳಿವೆ. ಸಿರಗಾಪುರಕ್ಕೆ ಹೋಗಿ ಭಜನಾಪದಕಾರನಾದ ಬಂಡೆಪ್ಪ ಕವಿಯ ಶೋಧ ನಡೆಸಿದ್ದು ಹೀಗೆಯೇ. ಅವರ ಕವಿಚರಿತೆಯಲ್ಲಿಯ ಬಹುತೇಕ ಕವಿಗಳನ್ನು ಹುಡುಕಿಕೊಂಡು ಹೋಗಿಯೇ ಅವರ ವ್ಯಕ್ತಿ ಪರಿಚಯ, ಸಾಹಿತ್ಯದ ಪರಿಚಯ ದಾಖಲಿಸಿದ್ದು, ಬರೆದದ್ದು. ಡಾ। ಲಠ್ಠೆ ಅವರ ಓಡಾಟದ ಸುಳುಹುಗಳು ಅವರ 'ಜನಪದ ಕವಿಚರಿತೆ'ಯ ತುಂಬ ಅಲ್ಲಲ್ಲಿ ದೊರೆಯುತ್ತವೆ.

**ಬದಲಾಗಬೇಕಾದ ಸಂಶೋಧನೆಯ ಸ್ವರೂಪ :** ಸಂಶೋಧನೆ ಎಂದರೆ ಕೇವಲ ಲಿಖಿತಮೂಲದ ಮಾಹಿತಿ ಸಂಗ್ರಹ, ಸಂಪಾದನೆ, ವಿಶ್ಲೇಷಣೆ– ಅಷ್ಟಕ್ಕೇ ಸೀಮಿತವಾದುದಲ್ಲ. ಒಂದು ನಾಡಿನ ಸಂಸ್ಕೃತಿ, ಚರಿತ್ರೆ– ಇವುಗಳನ್ನು ಸೃಷ್ಟಿಸುವ ಮತ್ತು ಕಾಪಾಡಿಕೊಂಡು ಬರುವ ಮಹತ್ವದ ಕೆಲಸ ನಡೆದಿರುವುದೆ ಮೌಖಿಕ ಪರಂಪರೆಯಲ್ಲಿ. ಹೀಗಾಗಿ ಮೌಖಿಕ ಮೂಲದ ಮಾಹಿತಿಶೋಧ, ಮತ್ತು ದಾಖಲಾತಿ, ಅದರ ಪರಿಚಯ ಮತ್ತು ವಿಶ್ಲೇಷಣೆಗಳು ಅತ್ಯಂತ ಮಹತ್ವದ ಸಂಶೋಧನೆಗಳೆನಿಸುತ್ತವೆ.

**ದಾರಿಯಿಲ್ಲದ ಊರಿನ ಶೋಧ :** ಡಾ। ಲಠ್ಠೆ ಅವರ ಕ್ಷೇತ್ರಕಾರ್ಯದ (ಶೋಧದ) ಮಾದರಿಯ ಇನ್ನೊಂದು ಉದಾಹರಣೆ ತೀರ ಸೋಜಿಗವಾಗಿದೆ. ಕಲಬುರ್ಗಿ ಜಿಲ್ಲೆಯಲ್ಲಿ ದ್ಯಾಗಾಯಿಯ ಹಜರತಸಾಹೇಬನದು ದೊಡ್ಡ ಹೆಸರು. ಆ ಬಗೆಗೆ ತಿಳಿಯುತ್ತಲೇ ಹಜರತಸಾಹೇಬರು ಬದುಕಿರುವುದನ್ನು ತಿಳಿದುಕೊಂಡು, 'ದ್ಯಾಗಾಯಿಗೆ ಹೋಗುವಾ' ಎಂದು ತಯಾರಾದರು. ಸರಿ ಒಂದು ರವಿವಾರ, ದ್ಯಾಗಾಯಿಗೆ ಹೊರಟು ನಿಂತೆವು. ತಿರುಗಿ ಕಲಬುರ್ಗಿಗೆ ಬಂದುಸೇರುವ ವಿಚಾರ. ಹೀಗಾಗಿ ಜೊತೆಗೆ ತೆಗೆದುಕೊಂಡದ್ದು– ಒಂದು ಧ್ವನಿಮುದ್ರಣ ಯಂತ್ರ, ಒಂದಿಷ್ಟು ಕ್ಯಾಸೆಟ್ಟುಗಳು, ಡೈರಿ ಇತ್ಯಾದಿ.

ದ್ಯಾಗಾಯಿ ಆಳಂದ ತಾಲೂಕಿನ ಒಂದು ಕಾಡು ಹಳ್ಳಿ. ಬಸ್ಸುಗಳು ಓಡಾಡುವ ರಸ್ತೆಯಿಂದ ಸುಮಾರು ನಾಲ್ಕೈದು ಕಿಲೋಮೀಟರ್ ಒಳಗಡೆ ನಡೆದು ಹೋಗಬೇಕು. ಇಂದಿಗೂ ಸರಿಯಾದ ರಸ್ತೆ ಇಲ್ಲ. ನಾವು ದ್ಯಾಗಾಯಿಗೆ

ಹೊರಟದ್ದು ಈಗ ೩೦ ವರ್ಷಗಳ ಹಿಂದೆ (೧೯೭೬ ಇರಬೇಕು). ನಾನು ದ್ಯಾಗಾಯಿ ನೋಡಿದ್ದು ಅದೊಂದೇ ಸಲ. ಮುಂದೆ ದ್ಯಾಗಾಯಿ ಕವಿಗಳನ್ನು ಕುರಿತು ಪಿಎಚ್.ಡಿ. ಅಧ್ಯಯನ ಮಾಡಿಸಿದರೂ ನಾನು ಪುನಃ ಆ ಊರಿಗೆ ಹೋಗುವ ಧೈರ್ಯ ಮಾಡಲಿಲ್ಲ. ಅಂತಹ ಕಾಡುಹಳ್ಳಿ ಅದು.

ಕಲಬುರ್ಗಿಯಲ್ಲಿ ಆ ಕಡೆ ಹೋಗುವ ಬಸ್ಸಿಗೆ ಕುಳಿತು ಬೆಣ್ಣೆತೊರಾ ದಡದ ಮೇಲಿನ ಕಮಲಾನಗರದಲ್ಲಿ ಇಳಿದೆವು. ಅಲ್ಲಿಂದ ಮುಂದೆ ನಾಲ್ಕೈದು ಕಿಲೋಮೀಟರ್ ನಡೆಯುತ್ತಲೇ ಹೋಗಬೇಕು. ಕಮಲಾನಗರ ಮತ್ತು ಕರಹರಿ ಎಂಬ ಎರಡು ಹಳ್ಳಿಗಳು ನಮ್ಮೂರು ಸಲಗರ ಗ್ರಾಮದ ಮಗ್ಗುಲಿನ ಹಳ್ಳಿಗಳು. ಕಮಲಾನಗರದಲ್ಲಿ ಒಬ್ಬರು, ಕರಹರಿಯಲ್ಲಿ ಒಬ್ಬರು ಹೀಗೆ ಇಬ್ಬರು ಕವಿಗಳಿರುವುದನ್ನು ನಾನು ಮೊದಲೇ ಹೇಳಿದ್ದೆ. ಸರಿ ಕಮಲಾನಗರದ ಕವಿಗಳನ್ನು ಕಂಡು ಹಾಡಿಸಿ, ಒಂದಿಷ್ಟು ಮಾಹಿತಿ ಪಡೆದೆವು. ಕರಹರಿಗೆ ಮತ್ತೆ ಎರಡು ಕಿಲೋಮೀಟರ ನಡೆಯಬೇಕು. ಅಲ್ಲಿಗೆ ಹೋಗಿ ತಿರುಗಿಬಂದು, ದ್ಯಾಗಾಯಿಗೆ ಹೋಗುವುದು ಆಗುವುದಿಲ್ಲವೆಂದು, ಕರಹರಿ ಕವಿ ಶರಣಪ್ಪನ ಸಂಗತಿಗಳನ್ನು ಕಮಲಾನಗರದಲ್ಲಿಯೇ ಕೇಳಿಪಡೆದೆವು. ಅಲ್ಲಿಯೆ ಬೋಧನದಲ್ಲಿ ಇನ್ನೊಬ್ಬ ಕವಿ ಇರುವುದನ್ನು ತಿಳಿದು ಅವನ ಮಾಹಿತಿಯನ್ನೂ ಪಡೆದೆವು. ಮಧ್ಯಾಹ್ನವೇ ಆಗುತ್ತ ಬಂದಿತು. ನಡೆಯುತ್ತ ದ್ಯಾಗಾಯಿ ಕಡೆಗೆ ಹೊರಟೆವು.

ನಡುವೆ ಬಿಲಗುಂದಿ ಎಂಬ ಒಂದು ಸಣ್ಣ ಹಳ್ಳಿ. ಊರ ಹೊರಗಿನ ಮನೆಯಲ್ಲಿ ಸಿಕ್ಕ ಹೆಣ್ಣುಮಕ್ಕಳನ್ನು ಮಾತನಾಡಿಸುವುದು, ಹಾಡುಬರುತ್ತವೆಯೇ ಎಂದು ಕೇಳುವುದು, ನಿಮ್ಮೂರಲ್ಲಿ ಹಾಡು ರಚಿಸುವ ಕವಿಗಳು ಇದ್ದಾರೆಯೇ ಎಂದು ವಿಚಾರಿಸುವುದು, ಇದ್ದರೆ ಅವರನ್ನೂ ಭೇಟಿಯಾಗೋಣ ಎಂದು ಹೊರಡುವುದು ಡಾ|ಲಠ್ಠೆ ಅವರ ಸಹಜ ವರ್ತನೆಗಳು. ಬಿಲಗುಂದಿಯಲ್ಲಿ ಹೆಣ್ಣುಮಕ್ಕಳ ಎದುರಿಗೆ ಮತ್ತೆ ಧ್ವನಿಮುದ್ರಣ ಯಂತ್ರದ ಬಾಯಿಬಿಚ್ಚಿದೆವು. ಅಂತಹ ಯಂತ್ರಗಳನ್ನೇ ಕಂಡರಿಯದ ಹೆಣ್ಣುಮಕ್ಕಳು ಬಲು ಹಿಗ್ಗಿನಿಂದಲೇ ಹಾಡುತ್ತಿದ್ದರು. ಒಮ್ಮೆ ಪ್ರಾರಂಭವಾದರೆ ಅದನ್ನು ನಿಲ್ಲಿಸುವುದೇ ದೊಡ್ಡ

ಸಮಸ್ಯೆ ಎನಿಸುತ್ತಿತ್ತು. ಹೀಗಾಗಿ ಬಿಲಗುಂದಿಯಲ್ಲಿ ಒಂದಿಷ್ಟು ಹಾಡುಗಳು ದೊರಕಿದವು. ಆ ಊರಿನ ಒಬ್ಬ ಕವಿಯ ಮಾಹಿತಿಯೂ ದೊರೆಯಿತು. ಆದರೆ ಹೊತ್ತು ಇಲ್ಲದ ಸ್ಥಿತಿ ಬಂದಿತು. ಬಿಲಗುಂದಿಯ ಒಬ್ಬ ಶಿಕ್ಷಕ (ಅವರ ಹೆಸರು ನೆನಪಿನಲ್ಲಿ ಉಳಿದಿಲ್ಲ), ಇದೆಲ್ಲವನ್ನು ಕಂಡು ನಮ್ಮ ಜೊತೆಗೆ ದ್ಯಾಗಾಯಿಗೆ ಬರುವೆನೆಂದು ಹೇಳಿದರು. ಇದರಿಂದ ನಮಗೆ ಸ್ವಲ್ಪ ಸಮಾಧಾನವಾಯಿತು. ತೀರ ಅಪರಿಚಿತ ದಾರಿ, ಅಪರಿಚಿತ ಊರು. ಮಗ್ಗುಲೂರಿನವರೊಬ್ಬರು ಇದ್ದರೆ ಒಳ್ಳೆಯದೆಂದು ಅವರನ್ನು ಜೊತೆಗೆ ಕರೆದುಕೊಂಡು ಹೊರಟೆವು.

ದ್ಯಾಗಾಯಿ ಮುಟ್ಟುವ ಹೊತ್ತಿಗೆ ನನಗೆ ನೆನೆಪಿರುವಂತೆ ಐದು-ಐದುವರೆ ಗಂಟೆಯಾಗಿರಬೇಕು. ಜೊತೆಗೆ ಬಂದ ಶಿಕ್ಷಕನಿಗೂ ಆ ಊರಲ್ಲಿ ಯಾರೂ ಪರಿಚಯ ಇರಲಿಲ್ಲ. ಹಜರತಸಾಬನ ಮನೆ ಕೇಳಿದರೆ ಆ ಊರಲ್ಲಿ ಯಾರೂ ಹೇಳಲಿಲ್ಲ. ಕೊನೆಗೆ ನಾನು ಸ್ವಲ್ಪ ಸಿಟ್ಟಿಗೆ ಬಂದು, ಡಾ| ಲಠ್ಠೆ ಅವರ ಪರಿಚಯ ಹೇಳಿ, ಬಂದ ಉದ್ದೇಶ ಹೇಳಿದಾಗ, ಒಬ್ಬ ಸಣ್ಣ ಬಾಲಕ ಹಜರತ ಅವರ ಮನೆ ತೋರಿಸಲು ಮುಂದಾದ.

**ಮುಪ್ಪಾನು ಮುದುಕ ಹಜರತಸಾಹೇಬರ ಭೇಟಿ** : ಡಾ| ಲಠ್ಠೆ ಅವರಿಗೆ ಎಲ್ಲಿಲ್ಲದ ಖುಷಿ, ಸಂತೋಷ. ಹುಡುಗನನ್ನು ಕರೆದುಕೊಂಡು, ಮುಂದೆ ಮುಂದೆ ಹೊರಟರು. ಊರ ಹೊರಗೆ ನಾಲ್ಕೈದು ತೀರ ಜೀರ್ಣಾವಸ್ಥೆಗೆ ಬಂದಿದ್ದ ಗುಡಿಸಲುಗಳು. ಗುಡಿಸಲಿನ ಮುಂದೆ ಸಣ್ಣ ಸಣ್ಣ ಕೋಳಿ ಗೂಡುಗಳು. ಕೋಳಿಗಳು ಎಲ್ಲೆಂದರಲ್ಲಿ ತೀರ ಹೊಲಸು ಮಾಡಿದ್ದವು. ಸಂಜೆಯಾಗುತ್ತ ಬಂದಿರುವುದರಿಂದ ಕೋಳಿಗಳು ಗೂಡುಗಳ ಸಮೀಪ ಕೂಗುತ್ತ ಹಾರಾಡುತ್ತಿದ್ದವು. ಹಜರತ ಅವರ ಬಗ್ಗೆ ಕೇಳಿದೆವು. ಅವರದು ಆ ಜೀರ್ಣಗೊಂಡ ಗುಡಿಸಲುಗಳಲ್ಲಿಯೇ ಒಂದು ಗುಡಿಸಲು ಎಂದು ತಿಳಿದು ನಮಗೆ ದಂಗು ಬಡಿದಂತಾಯಿತು. ಹಜರತಸಾಹೇಬರೆಲ್ಲಿ? ಎಂದರೆ, ಅವರು ಹೊಲಕ್ಕೆ ಹೋಗಿರುವರೆಂದೂ (ಬಹುಶಃ ಕೂಲಿಗೆ) ಈಗ ಬರಬಹುದೆಂದೂ ಹೇಳಿದರು. ಹೇಸಿಕೊಳ್ಳುವ ಗಲೀಜು. ಆದರೆ ಡಾ| ಲಠ್ಠೆ ಅವರು

ಹಜರತಸಾಬರಿಗಾಗಿ ಕಾಯುವ ನಿರ್ಧಾರ ಮಾಡಿದರು.

ಕೆಲಹೊತ್ತಿನಲ್ಲಿ ಹಜರತಸಾಹೇಬರು ಬಂದರು. ಸಂಪೂರ್ಣವಾಗಿ ಶಕ್ತಿಗುಂದಿದ ದೇಹ. ಉಟ್ಟದ್ದು ಒಂದು ಜರ್ಝರಿತವಾದ ಲುಂಗಿ, ತೊಟ್ಟದ್ದು ಅದೇ ಸ್ಥಿತಿಯ ಒಂದು ಅಂಗಿ. ಸಂಪೂರ್ಣವಾಗಿ ಬಾಗಿದ ದೇಹ. ಒಂದೆರಡ್ಮೂರು ಹಿಡಿಯಷ್ಟು ತೊಗರಿ ಕೊಯ್ಲುಗಳ ಒಂದು ಸಣ್ಣ ಹೊರೆ ತಲೆಯ ಮೇಲೆ ಹೊತ್ತು ಬಂದ ಹಜರತಸಾಬರನ್ನು ಕಂಡು ಡಾ। ಲಠ್ಠೆ ಅವರೊಂದಿಗೆ ನಾನೂ ದಂಗಾದೆ. ಹಜರತಸಾಬನನ್ನು ನಾನು ನೋಡಿದ್ದು, ಅವರ ಎತ್ತರದ ನಿಲುವಿನಲ್ಲಿ, ಯೌವ್ವನದ ಭರಾಟೆಯಲ್ಲಿ, ನಮ್ಮೂರಿನ (ಸಲಗರ) ಜಾತ್ರೆಗೆ ಹಾಡಲು ಬರುತ್ತಿದ್ದಾಗ. ಹಜರತಸಾಬನು ಭೀಮಕವಿಯ ಬಸವಪುರಾಣದ ಕಥೆಯನ್ನು ಆಧರಿಸಿ– ಬಸವಣ್ಣನವರ ಕಥೆಯನ್ನು, ಕಲ್ಯಾಣ ಖಾಂಡದ ಕಥೆಯನ್ನು ಹಾಡಿ ಹೇಳುತ್ತಿದ್ದರೆ, ಇವನೇ ಹಜರತಸಾಬ ಎಂದು ನೋಡಲು, ಅವನ ಹಾಡುಗಾರಿಕೆಯನ್ನು ಕೇಳಲು ಜನ ಕಿಕ್ಕಿರಿದು ನೆರೆಯುತ್ತಿತ್ತು. ಜಾತ್ರೆಯಲ್ಲಿ ಹಜರತಸಾಬನ ಹಾಡು ಕೇಳಲು ಹೆಣ್ಣುಮಕ್ಕಳಿಗೆ ಆಗುವುದಿಲ್ಲವೆಂದು ಸಲಗರದ ನಡೂ ಊರಿನಲ್ಲಿ ಮತ್ತೆ ಅವನ ಹಾಡಕಿಯನ್ನು ಏರ್ಪಡಿಸುತ್ತಿದ್ದರು.

ಹಜರತಸಾಬನ ಕಂಠ ಕೇಳಲು ಸುಮಧುರವೇನಲ್ಲ. ಆದರೆ ಅವನ ಪಾಂಡಿತ್ಯ, ಹಾಡುಗಾರಿಕೆಯ ಗತ್ತು, ಅವನ ಘನಗಂಭೀರವಾದ ವ್ಯಕ್ತಿತ್ವ, ಎಂದೂ ಅವಾಚ್ಯವಾದ ಪದಗಳನ್ನು ಬಳಸದೆ ಇರುವ ರೀತಿ, ಇವೆಲ್ಲ ಅವನ ವ್ಯಕ್ತಿತ್ವದ ಮಹತ್ವದ ಸಂಗತಿಗಳಾಗಿದ್ದವು. ಆದರೆ ಮುಪ್ಪಿನ ವಯಸ್ಸಿನಲ್ಲಿ ಹಜರತಸಾಬನಂತಹ ಪಂಡಿತ, ಪ್ರತಿಭಾವಂತ ಕವಿಗೆ ಉಣ್ಣಲೂ ಉಡಲೂ ವಾಸಿಸಲೂ ಏನೂ ಇರಲಿಲ್ಲವೆಂಬುದು ಜನಪದ ಪ್ರತಿಭಾವಂತರ ಪಾಡನ್ನು ಸ್ಪಷ್ಟವಾಗಿ ಹೇಳುತ್ತಿತ್ತು.

ಅಂತಹದರಲ್ಲಿಯೇ ಡಾ। ಲಠ್ಠೆ ಅವರ ಪರಿಚಯುವಾಗಿ, ಹಜರತಸಾಬರು ಅವರ ಪ್ರಶ್ನೆಗಳಿಗೆ ಉತ್ತರ ಹೇಳಲು ಕುಳಿತರು. ಕೇಳಿದ

ಪ್ರಶ್ನೆಗಳಿಗೆ ಉತ್ತರ ಹೇಳಿದರು. ವಿವರಗಳನ್ನು ಬೇಸರವಿಲ್ಲದೆ ಕೊಟ್ಟರು. ಹಜರತಸಾಬನ ಕೈಯಲ್ಲಿ ನೂರಿನ್ನೂರು ರೂಪಾಯಿಗಳನ್ನಿಟ್ಟು ಡಾ। ಲಠ್ಠೆ ಅವರು ಅಲ್ಲಿಂದ ಹೊರಟರು.

**ದ್ಯಾಗಾಯಿ ಪ್ರತಿಭಾವಂತ ಕವಿಗಳ ಬೀಡು :** ಹಜರತಸಾಬರ ಮಾಹಿತಿ ಪಡೆಯುವಷ್ಟರಲ್ಲಿ ಸಂಪೂರ್ಣ ಕತ್ತಲಾಗಿತ್ತು. ಬರುತ್ತ ಮತ್ತೆ ಊರಲ್ಲಿಯ ಜನ ತಡೆದರು. ಅಲ್ಲಿಯ ಕವಿ ಅಂಬಾರಾಯ ಭೇಟಿಯಾದ. ವಿವರ ಪಡೆದೆವು. ಮತ್ತೆ ಒಂದರ್ಧ ತಾಸು ಹಾಡುಗಾರಿಕೆ ಕೇಳಬೇಕಾಯಿತು. ಆ ಊರಿನ ಮಹಾಲಿಂಗ–ಮಹಾರುದ್ರ, ಗುಂಡಪ್ಪ–ಭದ್ರಪ್ಪ ಈ ಕವಿಗಳ ವಿವರಗಳೆಲ್ಲ ದೊರೆತವು. ನಾಗರಿಕ ಸಂಪರ್ಕವಿಲ್ಲದ ಒಂದು ಸಣ್ಣ ಹಳ್ಳಿಯಲ್ಲಿ ಇಷ್ಟೊಂದು ಪ್ರತಿಭಾವಂತ ಜನಪದ ಕವಿಗಳು ಆಗಿಹೋಗಿರುವುದು ಮತ್ತೆ ಈಗ ಹಜರತಸಾಹೇಬ, ಅಂಬಾರಾಯ ಅವರಂತಹ ಕವಿಗಳು ಬದುಕಿರುವುದು ಒಂದು ಸೋಜಿಗವೇ. ಈ ಸಂಗತಿಯಿಂದಾಗಿಯೇ ಮುಂದೆ ಒಬ್ಬ ವಿದ್ಯಾರ್ಥಿಯನ್ನು ಪ್ರೇರೇಪಿಸಿ **'ದ್ಯಾಗಾಯಿ ಲಾವಣಿಕಾರರು'** ಎಂಬ ಪಿಎಚ್.ಡಿ.ಅಧ್ಯಯನವನ್ನು ಮಾಡಿಸಲು ನನಗೆ ಸಾಧ್ಯವಾದುದು. ಡಾ। ಲಠ್ಠೆ ಅವರ ಓಡಾಟದಿಂದಾಗಿಯೇ ಪರಿಚಯವಾದ ಸಾವಳಗಿ ಮಹಮ್ಮದಸಾಬನನ್ನು ಕುರಿತು ಪ್ರತ್ಯೇಕ ಪಿಎಚ್.ಡಿ. ಅಧ್ಯಯನ ಮಾಡಿಸಲು ಸಾಧ್ಯವಾಗಿರುವುದು. ಹಾಗೆಯೇ ಮಹಾಗಾಂವದ ಮೀರಾಸಾಬನನ್ನು ಕುರಿತು ಇಂತಹ ಅಧ್ಯಯನಗಳು ನಡೆಯಲು ಸಾಧ್ಯವಾದುದು.

**ಡಾ। ಲಠ್ಠೆ ಅವರು ಮಾದರಿ ಸಂಶೋಧಕರು :** ಈ ಮೇಲಿನ ಎಲ್ಲಾ ಸಂಗತಿಗಳ ಹಿನ್ನೆಲೆಯಲ್ಲಿ ಡಾ। ಎಂ.ಎಸ್.ಲಠ್ಠೆ ಅವರನ್ನು ಕೇವಲ ಸಂಗ್ರಾಹಕರೆಂದು ಗುರುತಿಸುವುದು ದೊಡ್ಡ ಪ್ರಮಾದ. ಮೈಸೂರಿನ ಕಡೆ ಡಾ। ಜೀಶಂಪ, ಧಾರವಾಡದ ಕಡೆ ಡಾ। ಬಿ.ಎಸ್.ಗದ್ದಗಿಮಠ ಮಾಡಿದ ಕೆಲಸಗಳನ್ನು ಗಣಿಸುವಂತೆ ಕಲಬುರ್ಗಿಯ ಕಡೆ ಡಾ। ಲಠ್ಠೆ ಅವರ ಕೆಲಸಗಳನ್ನು ಗಣಿಸಬೇಕಾಗುತ್ತದೆ.

ಡಾ। ಲಠ್ಠೆ ಅವರಿಗೆ ಆಕರ್ಷಿಸಿದ್ದು ಜನಪದ ಹಾಡು ಮತ್ತು ಬಯಲಾಟಗಳು, ಹಾಗೂ ಅವುಗಳನ್ನು ಸೃಷ್ಟಿಸಿದ ಕವಿಗಳು.

**ಜಾನಪದದಲ್ಲಿ ಇರುವ ನಾಮಧೇಯ ಸಾಹಿತ್ಯದ ಶೋಧ :** ಜನಪದ ಸಾಹಿತ್ಯದಲ್ಲಿ ಎರಡು ಬಗೆಯ ಸಾಹಿತ್ಯ ಧಾರೆಗಳಿರುವುದನ್ನು ಗುರುತಿಸಬಹುದಾಗಿದೆ. ಒಂದು ಬಹುಮುಖ್ಯವಾದ ಮೌಖಿಕ ಧಾರೆ, ಇನ್ನೊಂದು ಸಂಪೂರ್ಣ ಲಿಖಿತಮೂಲವಲ್ಲವಾದರೂ ನಾಮಧೇಯವಾದ ಒಂದು ಧಾರೆ. ಡಾ। ಲಠ್ಠೆ ಅವರು ಪ್ರಾರಂಭದಲ್ಲಿ ಗಾದೆ, ಒಗಟು, ಒಡಪು, ಹಂತಿಯ ಹಾಡು, ನುಡಿಗಟ್ಟುಗಳು, ಚುಕ್ಕೋಳ ಪದಗಳು, ನಂಬಿಕೆಗಳು, ಸಾರಥಿ ಮಾತುಗಳು ಹೀಗೆ ಅನಾಮಧೇಯವಾದ ಸಾಹಿತ್ಯ ಪ್ರಕಾರಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಾರೆ. ಆದರೆ ನಂತರ ಅವರ ಲಕ್ಷ ಸೆಳೆದುವು ನಾಮಧೇಯ ಜನಪದ ಸಾಹಿತ್ಯ ಪ್ರಕಾರಗಳು.

ಜಾನಪದವಾದರೂ ಮೌಖಿಕ ಪರಂಪರೆಯ ಗುಣಗಳನ್ನು ಹೊಂದಿದ್ದೂ ಅನಾಮಧೇಯವಲ್ಲದ, ಸೃಷ್ಟಿಕರ್ತರ ಹೆಸರಿನ ಜೊತೆಗೆ ಪ್ರಚಾರಹೊಂದಿ ಬಳಕೆಯಲ್ಲಿ ಇರುವ ಕೃತಿಗಳ ಮಾಹಿತಿಗಳು ನಮಗೆ ದೊರೆಯುತ್ತವೆ. ಇಲ್ಲಿ ಗಂಡುಮಕ್ಕಳ ಸೃಷ್ಟಿಗಳಾದ ಭಜನೆ (ತತ್ವಪದ,ಸ್ವರವಚನ), ಮೋಹರಂ, ಲಾವಣಿ ಈ ಮುಂತಾದ ಹಾಡಿನ ಪ್ರಕಾರಗಳಲ್ಲದೆ, ಬಹು ಪ್ರಮುಖವಾದ ಬಯಲಾಟ ಪ್ರಕಾರಗಳೂ ಇದರಲ್ಲಿ ಸೇರುತ್ತವೆ. ತೀರಾ ಪ್ರತಿಭಾವಂತರ, ಅಲ್ಪ ಅಕ್ಷರಬಲ್ಲವರ ಸೃಷ್ಟಿಗಳಾದ ಇವನ್ನು ಉತ್ಸವದಂತಹ ಮತ್ತು ಹೆಚ್ಚು ಧಾರ್ಮಿಕವಲ್ಲದ ಪರಿಸರದಲ್ಲಿ ಬಳಸುವ, ಬಹುತೇಕ ಜನ ಗಂಡಸರೇ ಸೃಷ್ಟಿಮಾಡಿರುವ ಪ್ರಕಾರಗಳು ಇದರಲ್ಲಿ ಕಾಣುತ್ತವೆ. ಎಲ್ಲ ಸಮುದಾಯದ ಪ್ರತಿಭಾವಂತರು ಸೃಷ್ಟಿಸುವ ಸಾಹಿತ್ಯ ಪ್ರಕಾರಗಳಿವು. ಹೀಗೆ ಕವಿ–ಕಾವ್ಯ ಪರಂಪರೆ ಗುರುತಿಸಲು ಸಾಧ್ಯವಿರುವ ಸಾಹಿತ್ಯ ಪ್ರಕಾರಗಳು ಡಾ। ಲಠ್ಠೆ ಅವರಿಗೆ ಹೆಚ್ಚು ಹಿಡಿಸಿವೆ. ಈ ಮೂಲಕ ಒಂದು ಹೊಸ ಸಂಶೋಧನೆಯ ಧಾರೆಯಾಗಿ ಬೆಳಕು ಕಂಡಿವೆ.

ಹೀಗಾಗಿ ಡಾ। ಗದ್ದಗೀಮಠ ಮತ್ತು ಮತ್ತು ಡಾ। ಜೀಶಂಪ ಅವರು ಗುರುತಿಸಿದ, ಅಧ್ಯಯನ ಮಾಡಿದ ಎರಡು ಧಾರೆಗಳಿಗೆ ಹೊರತಾದ, ಭಿನ್ನವಾದ ಮತ್ತೊಂದು ಧಾರೆಯನ್ನು ಡಾ। ಲಠ್ಠೆ ಅವರು ಗುರುತಿಸಿದ್ದು, ಮತ್ತು ಆ ಬಗೆಗೆ ಗಮನಾರ್ಹವಾದ ಕೃತಿಯೊಂದನ್ನು ಕನ್ನಡ ಸಾಂಸ್ಕೃತಿಕ ಲೋಕಕ್ಕೆ ನೀಡಿದ್ದು (ಜನಪದ ಕವಿಚರಿತೆ)ಅವರ ಸಂಶೋಧನೆಯಲ್ಲಿ ಗಮನಾರ್ಹ ಕೊಡುಗೆ ಎನಿಸುತ್ತದೆ.

**ಜನಪದ ಕವಿ–ಕಾವ್ಯ ಪರಂಪರೆಯ ಶೋಧ ಮತ್ತು ಪ್ರಕಟಣೆ :** ಡಾ। ಲಠ್ಠೆ ಅವರು ಜನಪದ ಕವಿ–ಕಾವ್ಯಗಳನ್ನು ಕುರಿತು ಕೆಲಸ ಮಾಡಿದರು. ಬಹುದೊಡ್ಡ ಪ್ರಮಾಣದಲ್ಲಿ ಜನಪದ ಕವಿಗಳನ್ನು ಗುರುತಿಸಿದ್ದು, ಅವರು ರಚಿಸಿದ ಹಾಡುಗಳನ್ನು ಪ್ರತ್ಯೇಕ ಸಂಗ್ರಹಗಳನ್ನಾಗಿ ಪ್ರಕಟಿಸಿದ್ದು ಡಾ। ಲಠ್ಠೆ ಅವರ ಮಹತ್ವದ ಕೆಲಸಗಳಾಗಿವೆ. ಇವೆಲ್ಲದರ ಫಲವಾಗಿಯೇ **'ಉತ್ತರ ಕರ್ನಾಟಕದ ಜನಪದ ಕವಿಚರಿತೆ'(೧೯೭೯)** ರಚನೆಯಾದದ್ದು.

ಇಡೀ ಉತ್ತರ ಕರ್ನಾಟಕದ ತುಂಬ, ಹಳ್ಳಿ ಹಳ್ಳಿಗೂ ಸ್ವತಃ ಹೋಗಿ, ೨೬೦ ಜನ ಕವಿಗಳ ಚರಿತ್ರೆಯನ್ನು ಬರೆದದ್ದು ಕರ್ನಾಟಕದ ಸಂಶೋಧನಾ ಕ್ಷೇತ್ರಕ್ಕೆ ಲಠ್ಠೆ ಅವರ ಬಹುದೊಡ್ಡ ಕೊಡುಗೆ ಎಂಬುದರಲ್ಲಿ ಎರಡು ಮಾತಿಲ್ಲ.

**ಬೇಸರವಿಲ್ಲದೆ ಮತ್ತೆ ಮತ್ತೆ ಕೆಲಸ ಮಾಡಿದವರು :** ಡಾ। ಎಂ. ಎಸ್. ಲಠ್ಠೆ ಅವರು ತಾವು ಹೊಸದಾಗಿ ಗುರುತಿಸಿದ ಸಂಶೋಧನೆಯ ಒಂದು ಕ್ಷೇತ್ರವನ್ನು ಗಟ್ಟಿಗೊಳಿಸುವುದಕ್ಕಾಗಿ ಮೊದಲು ನಾಲ್ಕುವರ್ಷ ೧೯೭೬ ರಿಂದ ೧೯೭೯ರ ವರೆಗೆ, ಹತ್ತು ಲೇಖನಗಳ ರೂಪದಲ್ಲಿ **'ಜನಪದ ಕವಿಚರಿತೆ'** ಎಂಬ ಹೆಸರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಪ್ರಕಟವಾಗುವ **'ಕರ್ನಾಟಕ ಭಾರತಿ'** ಯ ೮ ರಿಂದ ೧೧ನೇ ಸಂಪುಟಗಳ ಸಂಚಿಕೆಗಳಲ್ಲಿ ಪ್ರಕಟಿಸಿದರು. ಇವುಗಳಲ್ಲಿ ಒಟ್ಟಿಗೆ ೧೨೦ ಕವಿಗಳ ಮಾಹಿತಿಯನ್ನು, ೧೪೨ ಪುಟಗಳ ವ್ಯಾಪ್ತಿಯಲ್ಲಿ ಬರೆದಿದ್ದಾರೆ. ಮತ್ತೆ **'ಹುಲಕುಂದ ಭಾಗದ ಲಾವಣಿಕಾರರು'** ಮತ್ತು **'ಬೆಳಗಾಂವ ಜಿಲ್ಲೆಯ ಜನಪದ ಕವಿಗಳು'** ಎಂಬ ಎರಡು ಲೇಖನಗಳು

ಪ್ರತ್ಯೇಕವಾಗಿ ಬೇರೆಡೆ ಪ್ರಕಟವಾಗಿವೆ. ಇವುಗಳ ಒಟ್ಟು ವ್ಯಾಪ್ತಿಯೇ ೧೭೪ ಪುಟಗಳಷ್ಟಿದೆ. ಇಲ್ಲಿಯ ಮಾಹಿತಿಗಳೆಲ್ಲ ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಮೂಲಕ ಪಡೆದವುಗಳು ಎಂಬುದನ್ನು ಗಮನಿಸಿದರೆ **'ಜನಪದ ಕವಿಚರಿತೆ'** ಎಂಬ ಕೃತಿಗಾಗಿ ಅವರು ಸತತವಾಗಿ ೫ ವರ್ಷ (೧೯೭೫-೧೯೭೯) ಕ್ಷೇತ್ರಕಾರ್ಯ ಮಾಡಿರುವುದು ಕಂಡುಬರುತ್ತದೆ.

**ನಡೆಯಬೇಕಾಗಿರುವ 'ಜನಪದ ಕವಿಚರಿತೆ' ಪರಿಷ್ಕರಣದ ಕೆಲಸ :** ೧೯೭೯ ರಲ್ಲಿ **'ಉತ್ತರ ಕರ್ನಾಟಕದ ಜನಪದ ಕವಿಚರಿತೆ'** ಮುದ್ರಣಗೊಂಡ ನಂತರವೂ ಅವರು ಈ ಬಗೆಯ ಕಾರ್ಯವನ್ನು ನಿರಂತರವಾಗಿ ಮಾಡಿದ್ದಾರೆ. ಹಲವಾರು ಕವಿಗಳ ಹಾಡುಗಳನ್ನು ಸಂಗ್ರಹಿಸಿದ್ದಾರೆ, ಕವಿಗಳ ಜೀವನ ಚರಿತ್ರೆಯ ಜೊತೆಗೆ ಅವನ್ನು ಪ್ರಕಟಿಸಿದ್ದಾರೆ. ಅವೆಲ್ಲವನ್ನೂ ಸೇರಿಸಿ, **'ಜನಪದ ಕವಿಚರಿತೆ'**ಯ ಪರಿಷ್ಕರಣ ಕಾರ್ಯ ನಡೆಯಬೇಕಾಗಿದೆ. ಆಗ ಇನ್ನೂ ಸ್ಪಷ್ಟವಾಗಿ ಡಾ। ಲಠ್ಠೆ ಅವರ ಸಂಶೋಧನೆಯ ಮಹತ್ವ ನಮ್ಮ ಗಮನಕ್ಕೆ ಬರುತ್ತದೆ.

**ಪಾಶ್ಚಾತ್ಯರ ಹೆಸರುಗಳ ನಡುವೆ ದೇಶೀ ವಿದ್ವಾಂಸರ ಹೆಸರುಗಳು :** ಪಾಶ್ಚಾತ್ಯರ ಕೆಲಸಗಳನ್ನು ಕಂಡು ಅವರನ್ನು ಬೆರಗಾಗಿ ನೋಡುವವರು ನಾವು. ಅವರ ಕೆಲಸಗಳನ್ನು ಮಹಾನ್ ಸಂಶೋಧನೆಯ ಕೆಲಸಗಳೆಂದು ಹೊಗಳುವಲ್ಲಿಯೇ ಖುಷಿಪಡುತ್ತೇವೆ. ಮೆಕೆಂರ್ಝಿ, ಫ್ಲೀಟ್, ಕಿಟೆಲ್, ಬಿ.ಎಲ್.ರೈಸ್, ಈ.ಪಿ.ರೈಸ್ ಮುಂತಾದವರು ಮಾಡಿದ ಕೆಲಸಗಳನ್ನು ಸಂಶೋಧನೆಯ ಕೆಲಸಗಳೆಂದು ಯಾವುದೇ ಅನುಮಾನವಿಲ್ಲದೆ ಹೇಳುತ್ತೇವೆ. ಇವರೆಲ್ಲ ಮಾಡಿದ್ದು ನಮ್ಮಲ್ಲಿ ದೊರೆಯುವ ಶಾಸನ, ಹಸ್ತಪ್ರತಿ, ಐತಿಹ್ಯ, ಪುರಾತನ ವಸ್ತುಗಳು ಇವುಗಳ ಸಂಗ್ರಹದ ಕೆಲಸ. ಕೆಲವರು ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ. ಯಾಕೆ ಇವರೆಲ್ಲ ಸಂಶೋಧಕರೆನಿಸುತ್ತಾರೆ ಎಂಬುದನ್ನು ನಾವು ಹೇಳಲು ಸಾಧ್ಯವಾದರೆ, ಅವೇ ಕಾರಣಗಳಿಗಾಗಿ ಡಾ। ಲಠ್ಠೆ ಅವರ ಎಲ್ಲ ಕೆಲಸಗಳು ಸಂಶೋಧನೆಯ ಕೆಲಸಗಳೇ ಎನಿಸುತ್ತವೆ. ಜೊತೆಗೆ ಪಾಶ್ಚಾತ್ಯ ವಿದ್ವಾಂಸರು ಸ್ವತಃ ಮಾಡಿದ ಕೆಲಸಗಳಲ್ಲ ಅವು. ಅವರ ಕೈಕೆಳಗೆ ಹಲವಾರು ಜನ ಕನ್ನಡದ ವಿದ್ವಾಂಸರು

ಕೆಲಸ ಮಾಡಿದ್ದಾರೆ. ಮತ್ತು ಇವರೆಲ್ಲ ಬಳಸಿದ ಹಣ– ಸರಕಾರ ಇಲ್ಲವೆ ಧಾರ್ಮಿಕ ಸಂಸ್ಥೆಗಳ ಹಣ ಎಂಬುದನ್ನು ನೆನಿಸಿಕೊಳ್ಳಬೇಕು. ಡಾ| ಎಂ.ಎಸ್.ಲಠ್ಠೆ ಅವರು ವೈಯಕ್ತಿಕವಾಗಿ– ಸಂಗ್ರಹ, ಸಂಪಾದನೆ, ಪ್ರಕಟನೆಗಳನ್ನು ಮಾಡುವಾಗ ಬಹಳವೆಂದರೆ ಕೆಲ ವಿದ್ಯಾರ್ಥಿಗಳ, ಕೆಲ ಜನ ಸ್ನೇಹಿತರ ಸಹಾಯ ಪಡೆದಿರಬಹುದು; ಅದರ ಜೊತೆಗೆ ಮುಖ್ಯವಾಗಿ ಅವರು ಸ್ವತಃ ದುಡಿದದ್ದನ್ನು ನಾವು ಲೆಕ್ಕಕ್ಕೆ ಹಿಡಿಯಲೇಬೇಕಾಗುತ್ತದೆ. ಅವರು ಮಾಡಿದ ಖರ್ಚಂತೂ ತಮ್ಮ ಸ್ವಂತ ಹಣವೇ ಎಂಬುದನ್ನು ಗಮನಿಸಬೇಕು.

**ಅವರ ಸಂಗ್ರಹಗಳು ಸಂಶೋಧನೆಯ ಕೊಡುಗೆಗಳು** : ಡಾ| ಲಠ್ಠೆ ಅವರ ಸಾಹಸಗಳನ್ನು ನಾವು ಸಂಶೋಧನೆಯ ಭಾಗಗಳಾಗಿಯೇ ಗಮನಿಸಬೇಕಾಗುತ್ತದೆ. ಅದರಲ್ಲೂ ಹೈದ್ರಾಬಾದ ಕರ್ನಾಟಕದಲ್ಲಿ ವೈಯಕ್ತಿಕ ನೆಲೆಯಲ್ಲಿ ಇಷ್ಟೊಂದು ಕೆಲಸ ಮಾಡಿದ್ದು ಸ್ಮರಣೀಯ. ಅವರ ಚುಕ್ಕೋಳ ಪದಗಳು, ಬಯಲಾಟದ ಸಾರಥಿ, ಜನಪದ ನಂಬುಗೆಗಳು– ಎಂಬ ಕೃತಿಗಳು ಬಲು ವಿಶಿಷ್ಟವಾದ ಜನಪದ ಸಾಹಿತ್ಯ–ಭಾಷಿಕ ಪ್ರಕಾರಗಳನ್ನು ಪರಿಚಯಿಸುವ ಕೃತಿಗಳು. ಈ ಬಗೆಯ ಕೃತಿಗಳು ಉತ್ತರಕರ್ನಾಟಕದಲ್ಲಿ ಆ ಮೊದಲು ಬೆಳಕು ಕಂಡಿರಲಿಲ್ಲ ಎಂಬುದು ಕೂಡ ಇಲ್ಲಿ ಗಮನಾರ್ಹ ಸಂಗತಿಯೆನಿಸುತ್ತದೆ.

ವಿಶೇಷವಾಗಿ ಕಲಬುರ್ಗಿ ಭಾಗದ ಜಾನಪದದ ಬಗ್ಗೆ ಮಾತನಾಡುವಾಗ, ವ್ಯಕ್ತಿಗತ ಕೆಲಸಗಳನ್ನು ಗಮನಿಸುವಾಗ ಡಾ| ಲಠ್ಠೆ ಅವರ ಹೆಸರನ್ನು ನಾವು ನೆನೆಯಬೇಕಾದುದು ಅನಿವಾರ್ಯ.

ಅವರು ೧೯೭೩ರಲ್ಲಿ ಗಾದೆಗಳ ಸಂಗ್ರಹಕ್ಕೆ ತೊಡಗಿದರು. ಗಾದೆಗಳನ್ನು ಸಂಗ್ರಹ ಮಾಡುತ್ತಲೇ ಅವರ ಗಮನಕ್ಕೆ ಬಂದುವು ಒಗಟು ಮತ್ತು ಒಡಪುಗಳು. ನೆರೆಮನೆಯ ಹೆಣ್ಣುಮಕ್ಕಳಿಂದ, ಹಿರಿಯರಿಂದ ಈ ಮೂರು ಪ್ರಕಾರಗಳನ್ನು ಒಮ್ಮೆಗೇ ಸಂಗ್ರಹಿಸತೊಡಗಿದರು.

ಅವರ ಪ್ರಾರಂಭದ ಸಂಗ್ರಹಗಳಿಗೆ 'ಉತ್ತರ ಕರ್ನಾಟಕ' ಎಂಬ ವಿಶೇಷಣವೊಂದು ಹಿಂದೆ ಸೇರಿಕೊಂಡಿರುವುದು ವಿಶೇಷ. **'ಉತ್ತರ ಕರ್ನಾಟಕದ**

**ಗಾದೆಗಳು' (೧೯೭೪), 'ಉತ್ತರ ಕರ್ನಾಟಕದ ಒಡಪುಗಳು'(೧೯೭೪), 'ಉತ್ತರ ಕರ್ನಾಟಕದ ಒಗಟುಗಳು'(೧೯೭೪), 'ಉತ್ತರ ಕರ್ನಾಟಕದ ನಂಬುಗೆಗಳು' (೧೯೭೪), 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು'(೧೯೭೫)** ಈ ಸಂಗ್ರಹಗಳು ಅವರ ಪ್ರಾರಂಭದ ಸಂಗ್ರಹಗಳು.

**ಜನಪದ ಕವಿಗಳ ಮಾಹಿತಿ ಸಂಗ್ರಹ :** ೧೯೭೫ ರಿಂದ ಕನ್ನಡ ವಿಭಾಗದಲ್ಲಿ ಡಾ। ಬಿ.ಬಿ.ಹೆಂಡಿ ಅವರ ನೇತೃತ್ವದಲ್ಲಿ **'ಉತ್ತರ ಕರ್ನಾಟಕದ ಏಳುಜಿಲ್ಲೆಗಳ ಜನಪದ ಹಾಡು ಕಥೆಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟನಾ ಯೋಜನೆ'** ಪ್ರಾರಂಭವಾಯಿತು. ಇಲ್ಲಿಂದ ಮುಂದೆ ಡಾ। ಎಂ.ಎಸ್. ಲಠ್ಠೆ ಅವರ ಕ್ಷೇತ್ರಕಾರ್ಯದ ಕೆಲಸ ಭಿನ್ನ ರೀತಿಯಲ್ಲಿ ಪ್ರಾರಂಭವಾಯಿತು. **'ಹಂತಿಯ ಹಾಡುಗಳು'** ಸಂಗ್ರಹಕ್ಕಾಗಿ ಅನೇಕ ಹಾಡುಗಾರರನ್ನು ಮನೆಗೆ ಕರೆಸಿ ಸಂಗ್ರಹದ ಕೆಲಸ ಮಾಡಿದ್ದರು. ಉಳಿದ ಸಂಗ್ರಹಗಳಿಗೆ ಸಾಹಿತ್ಯವನ್ನು ಸಹಜವಾಗಿಯೇ ಹಲವಾರು ಜನರಿಂದ ಸಂಗ್ರಹಿಸಿದ್ದರು. ಆದರೆ ೧೯೭೫ರಲ್ಲಿ ಯಾವಾಗ ಜಾನಪದ ಸಂಶೋಧನಾ ಯೋಜನೆ ಪ್ರಾರಂಭವಾಯಿತೋ ಅಲ್ಲಿಂದ ಅವರು ಸ್ವತಃ ಕ್ಷೇತ್ರಕ್ಕೆ ಹೋಗಲು ಪ್ರಾರಂಭಿಸಿದರು. ಹೀಗಾಗಿ ಅವರಿಗೆ ಜನಪದ ಕವಿಗಳ, ಕಲಾವಿದರ ನೇರ ಸಂಪರ್ಕ, ಪರಿಚಯ, ಒಡನಾಟ ಬರಲು ಪ್ರಾರಂಭವಾಯಿತು. ಸಂಶೋಧನಾ ಯೋಜನೆಗಾಗಿ ಸಾಹಿತ್ಯವನ್ನು ಸಂಗ್ರಹಿಸುವುದರ ಜೊತೆಗೆ ಜನಪದ ಕವಿಗಳ ವಿವರಗಳನ್ನು ಕಲೆಹಾಕತೊಡಗಿದರು. ಇದು ಅವರಲ್ಲಿ ಭಿನ್ನ ಬಗೆಯ ಜ್ಞಾನದ ಶಕ್ತಿ ತುಂಬುತ್ತ ನಡೆಯಿತು.

**'ಕರ್ನಾಟಕ ಭಾರತಿ' ಯಲ್ಲಿ ಜನಪದ ಕವಿಚರಿತೆ ಲೇಖನಮಾಲೆ :** ಒಂದು ಸಲ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಆಗಿನ ಮುಖ್ಯಸ್ಥರಾಗಿದ್ದ ಡಾ। ಸುಂಕಾಪುರ ಅವರು ಕಲಬುರ್ಗಿ ಪಿ.ಜಿ.ಕೇಂದ್ರಕ್ಕೆ ಬಂದಾಗ, ಸಹಜವಾಗಿಯೇ ಜಾನಪದ ಸಂಶೋಧನಾ ಯೋಜನೆಯ ಪ್ರಗತಿಯ ಬಗ್ಗೆ ಚರ್ಚಿಸುತ್ತಿದ್ದರು. ಆಗ ಡಾ। ಲಠ್ಠೆ ಅವರು ತಾವು ಟಿಪ್ಪಣಿ ಮಾಡಿಕೊಂಡಿದ್ದ

ಕವಿಗಳ ವಿಷಯವನ್ನು ಡಾ। ಸುಂಕಾಪುರ ಅವರ ಗಮನಕ್ಕೆ ತಂದರು. ಆ ಬಗೆಗೆ ಹೆಂಡಿ ಅವರ ಪ್ರಶಂಸನಾಪರ ಮಾತುಗಳನ್ನೂ ಆಲಿಸಿದ ಸುಂಕಾಪುರ ಅವರು ಈ ಜನಪದ ಕವಿಗಳ ಬಗ್ಗೆ ಬರೆದು ಕಳಿಸಿದರೆ, ನಿರಂತರವಾಗಿ ಅವನ್ನು 'ಕರ್ನಾಟಕ ಭಾರತಿ' ಸಾಹಿತ್ಯಕ ತ್ರೈಮಾಸಿಕದಲ್ಲಿ ಪ್ರಕಟಿಸುವುದಾಗಿ ಹೇಳಿದರು. (ಆಗ ಸುಂಕಾಪುರ ಅವರು 'ಕರ್ನಾಟಕ ಭಾರತಿ'ಯ ಸಂಪಾದಕರಾಗಿದ್ದರು).

ಇದರಿಂದ ಉತ್ತೇಜಿತರಾದ ಡಾ।ಲಠ್ಠೆ ಅವರು ಜನಪದ ಕವಿಚರಿತೆಯ ಬಗೆಗೆ ಲೇಖನಗಳನ್ನು ಬರೆಯಲು ಮುಂದಾದರು. ತಮ್ಮದು ಇಲ್ಲಿಂದ ಮಹತ್ವದ ಕೆಲಸ ಪ್ರಾರಂಭವಾಗುತ್ತದೆಂಬ ಮುನ್ನಾಲೋಚನೆ ಹೊಂದಿದ ಡಾ। ಲಠ್ಠೆ ಅವರು ಅವರ ಗುರುಗಳಾದ ಮತ್ತು ಸಾಹಿತ್ಯ ಚರಿತ್ರೆ ಬರೆದು ಅನುಭವವಿರುವ ಡಾ। ರಂ.ಶ್ರೀ. ಮುಗಳಿ ಅವರಿಗೆ ಕೆಲ ಕವಿಗಳ ಬಗೆಗೆ ಬರೆದು ಅಭಿಪ್ರಾಯಕ್ಕಾಗಿ ಕಳಿಸಿದರು. ಡಾ। ರಂ.ಶ್ರೀ. ಮುಗಳಿ ಅವರು ಕೂಡಲೇ ಪ್ರೋತ್ಸಾಹದಾಯಕವಾದ ಮಾತುಗಳನ್ನು ಬರೆದು, 'ಹೀಗೆಯೇ ಬರೆಯುತ್ತ ಹೋಗಿರಿ' ಎಂದು ಪತ್ರ ಬರೆದರು. ಡಾ। ಎಂ.ಎಸ್.ಲಠ್ಠೆ ಅವರು ಜನಪದ ಕಪಿಚರಿತೆಗೆ ಸಂಬಂಧಿಸಿದ ಲೇಖನಗಳನ್ನು ಬರೆದು 'ಕರ್ನಾಟಕ ಭಾರತಿ'ಗೆ ಕಳಿಸಲು ಪ್ರಾರಂಭಿಸಿದರು.

**ಕಲಾವಿದರಿಗೆ ಸಹಾಯ ಮಾಡಬೇಕೆಂಬ ಹಂಬಲ :** ಡಾ। ಎಂ.ಎಸ್.ಲಠ್ಠೆ ಅವರು ಕಲಾವಿದರನ್ನು ಕಂಡರೆ ಪ್ರೀತಿಯಿಂದ ಕಾಣುತ್ತಿದ್ದರು. ಮನೆಗೆ ಬಂದ ಕಲಾವಿದರನ್ನು ಅವರೆಂದೂ ಬರಿಗೈಲೆ, ಬರಿ ಹೊಟ್ಟಿಲೆ ಕಳಿಸಿದ ಉದಾಹರಣೆಗಳು ಸಿಗಲಾರವು. ಅವರು ಮೊಟ್ಟ ಮೊದಲಿಗೆ ಭಜನಾ ಹಾಡುಗಳ ಸೆಳೆವಿಗೆ ಸಿಕ್ಕದ್ದು **'ಶಿರಗಾಪುರ ಬಂಡೆಪ್ಪನ ಭಜನೆಯ ಹಾಡುಗಳು'** ಸಂಗ್ರಹ ಮತ್ತು ಪ್ರಕಟನೆಯಿಂದ. ಕಲಬುರ್ಗಿ ನಾಡಿನ ತುಂಬ ಬಂಡೆಪ್ಪನ ಭಜನೆ ಹಾಡುಗಳು ಪ್ರಸಿದ್ಧವಾಗಿದ್ದವು. ನಮ್ಮೂರು ಸಲಗರ ಗ್ರಾಮದ ಭಾಗದಲ್ಲಂತೂ ಅವನ ಹಾಡುಗಳು ತೀರ ಜನಪ್ರಿಯವಾಗಿದ್ದವು.

**ಸಂಗ್ರಹಗಳ ಮಹತ್ವ :** ಅವರು ಪ್ರಕಟಿಸಿದ ಒಂದೊಂದು ಸಂಗ್ರಹವೂ ತುಂಬಾ ಪರಿಶ್ರಮವನ್ನು, ಸಂಶೋಧನಾ ಶಿಸ್ತನ್ನು, ಸಾಂಸ್ಕೃತಿಕ ಮಹತ್ತನ್ನು, ಸಾಹಿತ್ಯಿಕ ವಿಶೇಷತೆಗಳನ್ನೂ ಹೊಂದಿವೆ. **'ಉತ್ತರ ಕರ್ನಾಟಕದ ಹಂತಿಯ ಹಾಡುಗಳು'** (೧೯೮೫) ಸಂಗ್ರಹವನ್ನು ಗಮನಿಸಿದರೆ ನಮಗೆ ಲಠ್ಠೆ ಅವರ ಸಂಗ್ರಹ ಸಂಪಾದನೆ ಸಂಶೋಧನೆ ಇವುಗಳ ಶಿಸ್ತು ಅರ್ಥವಾಗುತ್ತದೆ. ಈ ಸಂಗ್ರಹದಲ್ಲಿ ಪ್ರಕಟವಾದ ತ್ರಿಪದಿಗಳಿಗಿಂತ ಎರಡು ಪಟ್ಟು ತ್ರಿಪದಿಗಳನ್ನು ಅವರು ಸಂಗ್ರಹಿಸಿದ್ದರು. ಇಲ್ಲಿಯ ವಿಂಗಡನಾ ಕ್ರಮಕ್ಕೆ ಹಿಡಿಸಿದ ಉತ್ತಮ ತ್ರಿಪದಿಗಳನ್ನು ಮಾತ್ರ ಅವರು ಈ ಕೃತಿಗಾಗಿ ಆಯ್ದುಕೊಂಡರು.

**'ಹಂತಿಯ ಹಾಡುಗಳು'** ಸಂಗ್ರಹದ ಪರಿವಿಡಿ ನೋಡಿದರೆ ಅವರ ವಿಭಾಗೀಕ್ರಮದ ಮಹತ್ವ ನಮ್ಮ ಅರಿವಿಗೆ ಬರುತ್ತದೆ. ಮೊದಲನೆಯ ಭಾಗ ಸ್ತುತಿಗೆ ಸಂಬಂಧಿಸಿದ್ದು. ಇಲ್ಲಿ ರೈತನು ದೈವವನ್ನು ನಂಬಿದವನಾಗಿ ತನ್ನೆಲ್ಲ ಜೀವನಕ್ಕೆ ಮೂಲ ದೈವವೇ ಎಂಬುದನ್ನು ಶ್ರುತಪಡಿಸುತ್ತಾನೆ. ಆತ ನೆನೆಯದ ದೇವರೇ ಇಲ್ಲ ಎನಿಸುತ್ತದೆ. ಒಕ್ಕಲಿಗನದು ಸಹಕಾರ ಬದುಕು ಆಗಿರುವುದರಿಂದ ಅವರಿಗೆ ಈ ದೇವರು ಆ ದೇವರು ಎಂಬ ಭೇದಭಾವವಿಲ್ಲ. ಮೊದಲು ಎಲ್ಲ ದೇವರು ಸಮಾನರು, ಎರಡನೆಯದು ಎಲ್ಲ ಮಾನವರು ಸಮಾನರು ಎಂಬ ಭಾವವನ್ನು ರೈತನ ಮಾತಿನಲ್ಲಿ ಗ್ರಹಿಸಲು ಸಾಧ್ಯವಿದೆ. ಆತ ತನ್ನ ರೈತಬದುಕಿನಲ್ಲಿ ಸಹಾಯುಕವಾಗುವ ಪ್ರತಿಯೊಂದು ವಸ್ತುವನ್ನು, ಆಯಗಾರರನ್ನು, ಎತ್ತುಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತಾನೆ. ಅವುಗಳ ಸಹಾಯವನ್ನು ನೆನೆಯುತ್ತಾನೆ. ಹೀಗಾಗಿಯೇ ಎತ್ತು ಅವನಿಗೆ ಬಸವಣ್ಣ ಆಗುತ್ತಾನೆ. ಆಯಗಾರರು ಬಂಧುಬಾಂಧವರಾಗುತ್ತಾರೆ. ಕುಂಟಿ, ಕೂರಿಗೆ, ಮೇಟಿ, ರಾಗೋಲು ಎಲ್ಲವು ದೈವಗಳಾಗುತ್ತವೆ.

'ಸರದಾರ ನನ್ನೆತ್ತ' ಎನ್ನುವ ಭಾಗ ಸಂಪೂರ್ಣವಾಗಿ ಎತ್ತುಗಳ ದುಡಿಮೆಯನ್ನು, ಅವುಗಳ ಮಹತ್ವವನ್ನು, ತನ್ನೊಂದಿಗಿನ ಅವುಗಳ ಸಂಬಂಧವನ್ನು ಹೇಳಿಕೊಳ್ಳುವ ಭಾಗವಾಗಿದೆ. 'ರೈತನ ರಾಬ' ಎನ್ನುವ

ಮೂರನೆಯ ಭಾಗದಲ್ಲಿ ಸಂಪೂರ್ಣವಾಗಿ ರೈತನ ಒಂದುವರ್ಷದ ಆವರ್ತನೆಯಲ್ಲಿ ನಡೆಯುವ ಇಡೀ ರೈತ ಬದುಕಿನ ವೃತ್ತಾಂತವನ್ನು ಕಾಣುತ್ತೇವೆ. ಯುಗಾದಿಯ ದಿನ ಪಂಚಾಂಗ ನೋಡಿ ಹೊಲ ಉತ್ತಲು ಪ್ರಾರಂಭ ಮಾಡಿ, ಹೊಲದಲ್ಲಿಯ ಜೋಳ ರಾಶಿ ಮಾಡಿ ಮನೆಗೆ ತರುವವರೆಗಿನ ರೈತಬದುಕಿನ ಅಪರೂಪದ ಕ್ಷಣಗಳನ್ನು ಹಿಡಿದಿಡುವ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ತ್ರಿಪದಿಗಳಲ್ಲಿ ಜೋಡಿಸಿ ಕೊಟ್ಟಿದ್ದಾರೆ. ಇದು ಅವರ ಸಂಗ್ರಹ ಸಾಮರ್ಥ್ಯವನ್ನಷ್ಟೇ ಅಲ್ಲ, ಅವರ ಶೋಧದ ಗುಣವನ್ನು, ಬಿಡಿ ಹಾಡುಗಳಲ್ಲಿ ಬದುಕಿನ ಚರಿತ್ರೆಯನ್ನು ಕಟ್ಟಿಕೊಡುವ ಸೃಜನಶೀಲ ಶಕ್ತಿಯನ್ನು ವ್ಯಕ್ತಪಡಿಸುತ್ತದೆ.

ನಾಲ್ಕನೆಯ ಮತ್ತು ಐದನೆಯ ಭಾಗಗಳನ್ನು ಗಮನಿಸಿದರೆ, ಸ್ಥಳೀಯ ಮಹಾತ್ಮರಾಗಿ, ಇಂದು ದೇವರೆಂದು ಪೂಜಿಸಿಕೊಳ್ಳುವ ಮತ್ತು ಐತಿಹಾಸಿಕ ವ್ಯಕ್ತಿಗಳನ್ನು ನೆನೆಸಿಕೊಳ್ಳುವ ಚಿಕ್ಕ ಚಿಕ್ಕ ಚರಿತ್ರೆಗಳನ್ನು ಕಾಣುತ್ತೇವೆ. ಇವೆಲ್ಲ ರೈತ ಬದುಕಿನ ವಿಶಾಲ ಹೃದಯವನ್ನು ಹೇಳಿಕೊಡುತ್ತವೆ. ಆರನೆಯದರಲ್ಲಿ ರೈತನ ಶೃಂಗಾರದ ಕಲ್ಪನೆಯನ್ನು, ಏಳನೆಯದರಲ್ಲಿ ಅವನ ಸ್ಪರ್ಧಾ ಮನೋಭಾವವನ್ನು, ಎಂಟನೆಯದರಲ್ಲಿ ಅವನ ಹಾಸ್ಯಪ್ರಜ್ಞೆಯನ್ನು ಕಾಣುತ್ತೇವೆ. ಹೀಗೆ ಇಡಿಯಾಗಿ ಈ ಕೃತಿಯು ರೈತನ ಸುತ್ತ ವಿಸ್ತರಿಸಿಕೊಂಡಿರುವ ಬದುಕನ್ನು ವಿವರಿಸುವ ಮಹಾಕಾವ್ಯದಂತೆ ತೋರುತ್ತದೆ.

ಇಂತಹದೇ ಇನ್ನೊಂದು ಅಪರೂಪದ ಸಂಗ್ರಹ **'ಚುಕ್ಕೋಳ ಪದಗಳು'** (೧೯೭೬) ಎಂಬುದು. ಹಂತಿಯ ಹಾಡುಗಳಂತೆ ಮಕ್ಕಳನ್ನು ಲಾಲಿಸುವಾಗಿನ ಮತ್ತು ಮಕ್ಕಳನ್ನು ಪಾಲಿಸುವಾಗಿನ ಪದಗಳನ್ನು ಈ ಸಂಗ್ರಹದಲ್ಲಿ ಕಾಣುತ್ತೇವೆ.

**'ಚುಕ್ಕೋಳ ಪದಗಳು'** ಕೃತಿಯ ವಿಭಾಗೀಕ್ರಮ ಕೂಡ ವೈಜ್ಞಾನಿಕವಾಗಿದೆ. ಹುಡುಗಿಯರ ಹಾಡುಗಳು, ಹುಡುಗರ ಹಾಡುಗಳು, ಸಮ್ಮಿಶ್ರ ಹಾಡುಗಳು ಎಂದಿದ್ದು, ಮತ್ತೆ ಅವುಗಳಲ್ಲಿ ಮೂರು ಮೂರು ವಿಭಾಗಗಳನ್ನು ಮಾಡಲಾಗಿದೆ. ಈ ಭಾಗದ ಭಾಷೆ, ಸಂಸ್ಕೃತಿಗಳ ಅಧ್ಯಯನಕ್ಕೆ ಸಹಾಯವಾಗುವ ಪ್ರಮುಖ ಕೃತಿ ಇದು.

ಇನ್ನೊಂದು ವಿಶೇಷ ಸಂಗ್ರಹ ವೆಂದರೆ **'ಬಯಲಾಟದ ಸಾರಥಿ'** (೧೯೭೬) ಎಂಬುದು. ಇಡೀ ಕರ್ನಾಟಕದಲ್ಲಿ ಈ ಬಗೆಯ ಸಂಗ್ರಹವೊಂದು ಪ್ರಕಟವಾದುದು ಡಾ। ಲಠ್ಠೆ ಅವರಿಂದ ಎಂಬುದು ಒಂದು ಮಹತ್ವದ ಸಂಗತಿ. ದೊಡ್ಡಾಟಗಳಲ್ಲಿ ಬರುವ ಸಾರಥಿಯು ತನ್ನ ಪರಿಚಯ ಹೇಳುವ ಮತ್ತು ಪಾತ್ರಗಳ ಪರಿಚಯ ಕೇಳುವ ಮಾತುಗಳ ಸಂಗ್ರಹವಿದು. ಈ ಮಾತುಗಳನ್ನು ಬಯಲಾಟದ ಭಾಗವಾಗಿ ನೋಡಲಾಗದು. ಈ ಮಾತುಗಳನ್ನು ರಚಿಸಿದವರ ಮಾಹಿತಿಗಳು ಪ್ರತ್ಯೇಕವಾಗಿಯೇ ದೊರೆಯುತ್ತವೆ. ಇವಂತೂ ಪ್ರತಿಭಾವಂತ ಜನರ ಸೃಷ್ಟಿಗಳು. ಈ ಮಾತುಗಳನ್ನು ಹೇಳುವುದೂ ಒಂದು ಕಲೆ. ದೀರ್ಘವಾದ ಈ ಮಾತುಗಳನ್ನು ಕಲಿತು, ಸ್ಮರಣೆಯಲ್ಲಿ ಇಟ್ಟುಕೊಂಡು ಆಕರ್ಷಕವಾಗಿ ಪ್ರದರ್ಶನ ಮಾಡುವುದು ತುಂಬ ಕಠಿಣವಾದ ಸಂಗತಿ. ಹೀಗಾಗಿ ಜನಪದ ಭಾಷಿಕ ಬಗೆಯ ಪ್ರಕಾರಗಳಿಗೆ ಕರ್ನಾಟಕದಲ್ಲಿ ಡಾ। ಲಠ್ಠೆ ಅವರಿಂದ ಒಂದು ಹೊಸ ಪ್ರಕಾರ ಸೇರಿದಂತಾಗಿದೆ ಎಂಬುದು ಕೂಡ ದಾಖಲಾಗಬೇಕಾದುದು.

ಜನಪದ ಭಾಷಿಕ ಪ್ರಕಾರಕ್ಕೆ ಡಾ। ಲಠ್ಠೆ ಅವರ ಕೊಡುಗೆ ಅಪಾರವಾಗಿದೆ. ಗಾದೆ, ಒಗಟು, ಒಡಪು, ಚುಕ್ಕೋಳ ಪದಗಳು, ಬಯಲಾಟದ ಸಾರಥಿ, ಜನಪದ ನುಡಿಗಟ್ಟುಗಳು ಹಾಗೂ ಉತ್ತರ ಕರ್ನಾಟಕದ ಜನಪದ ನಂಬಿಕೆಗಳು– ಈ ಏಳು ಸಂಗ್ರಹಗಳು ಬಹುತೇಕ ಕಲಬುರ್ಗಿ ಭಾಗದ ಭಾಷೆ, ಸಂಸ್ಕೃತಿಯನ್ನು ಮುಖ್ಯವಾಗಿ ಪ್ರತಿನಿಧಿಸುವ ಸಂಗ್ರಹಗಳಾಗಿವೆ.

**ತತ್ತ್ವಪದಗಳ ಶೋಧ ಮತ್ತು ಪ್ರಕಟಣೆ :** ಗ್ರಾಮವಾಸಿ, ನಿರಕ್ಷರಿ ಅಚ್ಚ ಜನಪದ ಕವಿಗಳ ಭಜನೆಯ ಹಾಡುಗಳೂ ಅಭ್ಯಾಸಯೋಗ್ಯ ಎಂಬುದನ್ನು ಕರ್ನಾಟಕದಲ್ಲಿ ಮೊದಲಿಗೆ ಗುರುತಿಸಿ, ಸಂಗ್ರಹಿಸಿ, ಆಯಾ ಕವಿಗಳ ಪರಿಚಯದೊಂದಿಗೆ ಪ್ರಕಟಿಸಿದವರು ಡಾ। ಲಠ್ಠೆ ಅವರು. ೧೯೮೦ ಕ್ಕಿಂತ ಮುಂಚೆ ಕರ್ನಾಟಕದಲ್ಲಿ, ವಿದ್ವಾಂಸರು ತತ್ತ್ವಪದಗಳನ್ನು ಗಮನಿಸದೇ ಇದ್ದ ಸಂದರ್ಭದಲ್ಲಿ, ಡಾ। ಲಠ್ಠೆ ಅವರು ಆ ಕೆಲಸವನ್ನು ಮಾಡಿದ್ದು ದಾಖಲಾಗಬೇಕಾದ ಸಂಗತಿ. ೧೯೭೮ ರಲ್ಲೇ **'ಬಂಡೆಪ್ಪ ಕವಿಯ ಭಜನೆಯ**

**ಹಾಡುಗಳು', 'ಚನಮಲ್ಲಯ್ಯನ ಜಾನಪದ ಹಾಡುಗಳು'** ಎಂಬ ಎರಡು ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಆ ಕವಿಗಳ ಬಗೆಗೆ ದೀರ್ಘವಾಗಿ ಪರಿಚಯ ಬರೆದಿದ್ದಾರೆ. ಅಲ್ಲಿಂದ ನಿರಂತರವಾಗಿ ತತ್ತ್ವಪದಗಳನ್ನು ಪ್ರಕಟಿಸುತ್ತಲೇ ಹೋಗಿದ್ದಾರೆ.

ಭಜನೆ ಹಾಡುಗಳನ್ನು ಕುರಿತು ಅವರು ಪಡುವ ಅಭಿಪ್ರಾಯಗಳೂ ಮುಖ್ಯವಾಗಿವೆ. "ವೇದ ಶಾಸ್ತ್ರಗಳು ಪಂಡಿತರ ಸೊತ್ತು, ಭಜನೆ ಹಾಡುಗಳು ಪಾಮರರ ಆಸ್ತಿ. ವೇದ-ಶಾಸ್ತ್ರಗಳಲ್ಲಿ ತತ್ತ್ವ ಸಿದ್ಧಾಂತ ಅಡಕವಾಗಿದ್ದರೆ ಭಜನೆಯ ಹಾಡುಗಳಲ್ಲಿ ಅನುಭವ (ಜೀವನ) ಸಿದ್ಧಾಂತ ನಿರೂಪಿತವಾಗಿರುತ್ತದೆ. ಅನುಭಾವಿಗಳ, ಶರಣರ, ದಾಸರ, ಶಿವಯೋಗಿಗಳ ಹಾಡುಗಳನ್ನು ಭಜನೆಯ ಹಾಡುಗಳಲ್ಲಿ ಹಾಡುತ್ತ ಬಂದಿರುವುದಕ್ಕೂ ಇದೇ ಕಾರಣವಿರಬೇಕು. ಶರಣರ ಅನುಭವ ಪದಗಳು ಇಂಥ ಭಜನೆಯ ಹಾಡುಗಳಿಗೆ ನಾಂದಿಯಾಗಿವೆ. ...ಅನುಭವ ಪದಗಳನ್ನು ಭಕ್ತಿಗೀತೆ, ತತ್ತ್ವಪದ, ಭಜನೆಹಾಡು ಎಂದು ಕರೆಯುವರು. ದೇವರ ಪೂಜೆ, ಪ್ರಾರ್ಥನೆಗಾಗಿ ಹುಟ್ಟಿಕೊಂಡು ಬಂದ ಈ ಹಾಡುಗಳಲ್ಲಿ ಶ್ರದ್ಧೆ ಅದರೊಂದಿಗೆ ಲೋಕಾನುಭವ ಸೇರಿಕೊಂಡಿರುತ್ತದೆ". (ಬಂಡೆಪ್ಪ ಕವಿಯ ಭಜನೆಯ ಹಾಡುಗಳು,ಪ್ರಸ್ತಾವನೆ: ಪುಟ-೧೫).

**ಕಡಕೋಳದ ಮಡಿವಾಳಪ್ಪನವರ ಸಮಗ್ರ ಹಾಡುಗಳ ಪ್ರಕಟನೆ :** ಕಲಬುರ್ಗಿ ಭಾಗದ ಪ್ರಸಿದ್ಧ ಭಜನಾ ಹಾಡುಗಾರರೆಂದರೆ ಕಡಕೋಳದ ಮಡಿವಾಳಪ್ಪನವರು. ಈ ಭಾಗದಲ್ಲಿ ಇವರ ಹಾಡು ಕೇಳದವರನ್ನು ಕಾಣಲಾರೆವು. ಮಡಿವಾಳರ ಪ್ರಸಿದ್ಧಿಯೂ ಅಪಾರವಾದುದಾಗಿದೆ. ಇವರನ್ನು ಕುರಿತು ಕವಿಚರಿತೆಕಾರರಾದ ಡಾ। ಆರ್. ನರಸಿಂಹಾಚಾರ್ ಅವರು ಬರೆದಿರುವುದನ್ನು ಈ ಭಾಗದ ಪ್ರಸಿದ್ಧ ಸಂಶೋಧಕರಾದ ಡಾ। ವ್ಹಿ. ಶಿವಾನಂದ ಅವರು ಗಮನಿಸಿ, ಉಲ್ಲೇಖಿಸುತ್ತಾರೆ: "ಕಡಕೋಳದ ಮಡಿವಾಳಪ್ಪನವರು ಅಸಂಖ್ಯಾತ ಹಾಡುಗಳನ್ನು ಹಾಗು ವಚನಗಳನ್ನು 'ಮಹಾಂತಯೋಗಿ' ಎಂಬ ಅಂಕಿತದಿಂದ ರಚಿಸಿದ್ದಾರೆ. ಈ ಮಹಾಂತನು ಚಿಣಮಗೇರಿಯುವನಾಗಿದ್ದು, ಮಡಿವಾಳಪ್ಪನವರಿಗೆ ಆಧ್ಯಾತ್ಮಮಾರ್ಗದಲ್ಲಿ ಗುರುವಾಗಿದ್ದನೆಂಬುದಾಗಿ

ತಿಳಿದುಬರುತ್ತದೆ. ಇವರ ವಚನ ಹಾಗೂ ಹಾಡುಗಳು ಅವ್ಯವಸ್ಥಿತ ರೀತಿಯಲ್ಲಿ ಮುದ್ರಿತವಾಗಿರುವದರಿಂದ ಅವುಗಳ ನಿಜವಾದ ಆಂತರಿಕ ಅರ್ಥ ಒಮ್ಮೊಮ್ಮೆ ಹೊಳೆಯದೆ ಹೋಗುವದುಂಟು".

ಕಡಕೋಳ ಮಡಿವಾಳಪ್ಪನಂತಹ ಪ್ರಸಿದ್ಧ ಕವಿಯ ಲಭ್ಯವಿರುವ ಸಂಪೂರ್ಣ ಹಾಡುಗಳ ಸಂಗ್ರಹವನ್ನು ಪ್ರಪ್ರಥಮವಾಗಿ ಪ್ರಕಟಿಸಿದವರೇ ಡಾ। ಲಠ್ಠೆ ಅವರು. ೧೯೮೨ ರಲ್ಲಿ ಗದುಗಿನ ಮಠದಿಂದ **'ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು'** ಎಂಬ ಹೆಸರಿನಲ್ಲಿ, ಆಗ ಲಭ್ಯವಾಗಿದ್ದ ३೧೦ ಹಾಡುಗಳನ್ನು ಒಂದೆಡೆ ಸಂಪಾದಿಸಿ, ಮಡಿವಾಳಪ್ಪನವರ ಜೀವನ ಚರಿತ್ರೆಯನ್ನು ಸಾಧ್ಯವಾದಷ್ಟು ಸಮಗ್ರವಾಗಿ ಸಂಶೋಧಿಸಿ ಕೊಟ್ಟವರು ಡಾ। ಲಠ್ಠೆ ಅವರು. 'ಕಡಕೋಳ ಮಡಿವಾಳೇಶ್ವರರ ನಿಜಲೀಲಾಮೃತ'ವನ್ನು ೧೯೮೬ರಲ್ಲಿ ಪ್ರಕಟಿಸಿದ್ದಾರೆ.

ಇದು ಡಾ। ಲಠ್ಠೆ ಅವರ ಕೆಲಸದ ಮಾದರಿ. ಇಂತಹ ಕೆಲಸಕ್ಕಾಗಿ ಹಲವಾರು ಹಿರಿಕಿರಿಯರ ಬಾಗಿಲಿಗೆ ಹೋಗಲು, ಬೇಡಿ ಪಡೆಯಲು, ಕೇಳಿ ತಿಳಿಯಲು ಅವರಿಗೆ ಯಾವಾಗಲೂ ಮುಜುಗುರವಾಗಿಲ್ಲ. ತತ್ತ್ವಪದಗಳ ಚರಿತ್ರೆಯಲ್ಲಿ ಡಾ। ಎಂ.ಎಸ್.ಲಠ್ಠೆ ಅವರ ಕೆಲಸಗಳು ಮೈಲುಗಲ್ಲುಗಳಾಗಿ ನಿಲ್ಲುತ್ತದೆ.

**ಕೊನೆಯವರೆಗೂ ಮುಂದುವರೆದ ತತ್ತ್ವಪದಕಾರರ ಶೋಧ :** ಮುಂದೆಯೂ ಡಾ. ಲಠ್ಠೆ ಅವರು ಈ ಬಗೆಯ ಭಜನಾಕಾರರ ಹಾಡುಗಳನ್ನು, ಆ ಕವಿಗಳ ಜೀವನ ಚರಿತ್ರೆಗಳನ್ನು ಶೋಧಿಸುತ್ತಲೇ ಸಾಗಿದ್ದಾರೆ. ಸಾಧ್ಯವಾದಷ್ಟನ್ನು ಪ್ರಕಟಿಸುತ್ತಲೇ ಹೋಗಿದ್ದಾರೆ. 'ಬಂಡೆಪ್ಪ ಕವಿಯ ಭಜನೆಯ ಹಾಡುಗಳು'(೧೯೭೮), ಚೆನಮಲ್ಲ ಕವಿಯ ಜನಪದ ಹಾಡುಗಳು (೧೯೭೮), ಜಾನಪದದಲ್ಲಿ ಶ್ರೀ ಶರಣಬಸವೇಶ್ವರ (೧೯೭೮), ಜಾನಪದದಲ್ಲಿ ಹಾರಕೂಡ ಚೆನ್ನಬಸವ ಶಿವಯೋಗಿ (೧೯೭೯), 'ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು'(೧೯೮೨), ಏನಾರ ತಿಳ್ಕೊಳ್ಳಿ (೧೯೮೨), ಕಡಕೋಳ ಮಡಿವಾಳೇಶ್ವರರ ನಿಜಲೀಲಾಮೃತ (೧೯೮೬), ಶಿಲ್ಲಪ್ಪ ಕವಿಯ ಬದುಕು

ಬರಹ(೧೯೮೬), ನಿಜಲಿಂಗ ಭದ್ರೇಶ್ವರರ ಅನುಭವ ಪದಗಳು (೧೯೮೭), ದಲಿತಕವಿ ಜಂಬಗಿ ಶರಣರ ಬದುಕು ಬರಹ (೨೦೦೪) ಹೀಗೆ ಸ್ವರವಚನಗಳಿಗೆ ಸಂಬಂಧಿಸಿದ ಕೃತಿಗಳೇ ಒಟ್ಟಿಗೆ ಹತ್ತು ಇದ್ದು, ಅಷ್ಟೆಲ್ಲ ಕವಿಗಳ ಸಾಹಿತ್ಯವನ್ನು, ಅವರ ಬದುಕನ್ನು ಶೋಧಿಸಿದ, ಪರಿಚಯಿಸಿದ ಕೀರ್ತಿ ಡಾ। ಲಠ್ಠೆ ಅವರಿಗೆ ಸಲ್ಲುತ್ತದೆ.

**ಇತರ ಸಂಗ್ರಹಗಳು :** ಜಾನಪದ ಕ್ಷೇತ್ರಕ್ಕೆ ಡಾ। ಲಠ್ಠೆ ಅವರ ಕೊಡುಗೆಯಲ್ಲಿ ಜಾನಪದ ರಂಗಭೂಮಿ ಸಾಹಿತ್ಯ ಪ್ರಕಟಣೆಯಲ್ಲೂ ಗಮನಾರ್ಹ ಕೊಡುಗೆ ಇರುವುದನ್ನು ನೋಡುತ್ತೇವೆ. ಅವರು ಜಾನಪದ ಸಂಗ್ರಹಕ್ಕೆ ತೊಡಗಿದಾಗಲೇ ಅನೇಕ ಬಯಲಾಟಗಳ ಹಸ್ತಪ್ರತಿಗಳು ಅವರ ಕೈಗೆ ಬಂದಿದ್ದವು. ಆದರೆ ಅವುಗಳ ಪ್ರಕಟಣೆಯನ್ನು ಮಾತ್ರ ಸ್ವಲ್ಪ ಸಾವಕಾಶವಾಗಿ ಮಾಡಿದರೆಂದು ತೋರುತ್ತದೆ. ೧೯೭೩ ರಿಂದ ೧೯೮೨ರ ಈ ಹತ್ತು ವರ್ಷಗಳಲ್ಲಿ ಅವರು ಜಾನಪದ ಕ್ಷೇತ್ರದಲ್ಲಿ ಮಾಡಿದ ಕೆಲಸ ಅಗಾಧವೆನ್ನುವಂತಿದೆ.

**ಬಯಲಾಟಗಳ ಸಂಗ್ರಹಗಳು :** ಡಾ। ಲಠ್ಠೆ ಅವರು ತಾವು ಕೈಹಾಕಿದ ಕ್ಷೇತ್ರದಲ್ಲಿ ಸಮೃದ್ಧ ಎನ್ನುವಂತೆ ಕೆಲಸಮಾಡಿದ್ದಾರೆ. ಜನಪದ ಭಾಷಿಕ ಪ್ರಕಾರಗಳು, ತತ್ತ್ವಪದ ಸಂಗ್ರಹಗಳು, ಜನಪದ ಕವಿಚರಿತೆ, ಜೀವನ ಚರಿತ್ರೆಗಳು ಮತ್ತು ಬಯಲಾಟಗಳು– ಈ ಪ್ರಕಾರಗಳಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ನನ್ನ ಕೈಗೆ ದೊರೆತ ಬಯಲಾಟಗಳ ಕೃತಿಗಳು ೧೩ ಇವೆ. ಡಾ। ಲಠ್ಠೆ ಅವರು ಈ ಬಯಲಾಟಗಳನ್ನು ಶೋಧಿಸಿ, ಸಂಗ್ರಹಿಸಿ, ಸಂಪಾದಿಸಿ, ಅವುಗಳನ್ನು ರಚಿಸಿದ ಕವಿಗಳ ಜೀವನದ ಬಗ್ಗೆ, ಎಲ್ಲಿ ದೊರೆತವು ಎಂಬ ಮಾಹಿತಿಗಳ ಸಮೇತ, ತಕ್ಕ ಹಿನ್ನೆಲೆ ಒದಗಿಸುವ ಪ್ರಸ್ತಾವನೆಗಳೊಂದಿಗೆ ಬೇರೆ ಬೇರೆ ಸಂಸ್ಥೆಗಳಿಂದ ಪ್ರಕಟಿಸಿದ್ದಾರೆ. ಇವುಗಳಲ್ಲಿ ಇತರರ ಜೊತೆ ಸಂಪಾದನೆ ಮಾಡಿದ ಕೃತಿಗಳೂ ಇರುವುದು ಗಮನಾರ್ಹ.

ನನ್ನ ಕೈಯಲ್ಲಿರುವ ಕೃತಿಗಳಲ್ಲಿ ದೊಡ್ಡಾಟ, ಸಣ್ಣಾಟ ಮತ್ತು ವಿಶೇಷವಾಗಿ ಯಕ್ಷಗಾನಕ್ಕೆ ಸಂಬಂಧಿಸಿದ ಕೃತಿಗಳಿವೆ. ಅದರಲ್ಲೂ ಶರಣರಿಗೆ ಸಂಬಂಧಿಸಿದ ಮೂರು ಕೃತಿಗಳು– ಜನಪದ ರಂಗಭೂಮಿಯ ದೊಡ್ಡಾಟ,

ಸಣ್ಣಾಟ, ಯಕ್ಷಗಾನ ಈ ಪ್ರಕಾರಗಳಿಗೆ ಸಂಬಂಧಿಸಿದ ಒಂದೊಂದು ಕೃತಿಗಳಿರುವದು ವಿಶೇಷ. 'ಪ್ರಭುದೇವರ ಯಕ್ಷಗಾನ' (೧೯೮೨), ಬಸವವಿಜಯ (ದೊಡ್ಡಾಟ,೧೯೮೯), ಶಿವಶರಣ ಹರಳಯ್ಯ (ಸಣ್ಣಾಟ,೧೯೯೩) ಇವು ಶರಣರ ಚರಿತ್ರೆಗಳನ್ನು, ಅವರ ವ್ಯಕ್ತಿತ್ವಗಳನ್ನು ಜನಸಾಮಾನ್ಯರು ಸ್ವೀಕರಿಸಿದ ಬಗೆಯನ್ನು ಹೇಳುವ ಅಪರೂಪದ ಕೃತಿಗಳೆನಿಸುತ್ತವೆ.

ಇನ್ನೂ ಮೂರು ವಿಶೇಷವಾದ ರಂಗಕೃತಿಗಳನ್ನು ಅವರು ಸಂಪಾದಿಸಿದ್ದಾರೆ. ನನಗೆ ತಿಳಿದಂತೆ 'ಅರಬರಾಟ' (೧೯೮೪) ಎನ್ನುವುದು ಕಲಬುರ್ಗಿ ಭಾಗದಲ್ಲಿ ಆಗಾಗ ಕೇಳಿಬರುತ್ತಿದ್ದ ಹೆಸರು. ಮುಸಲ್ಮಾನರು ಕಲಬುರ್ಗಿ ಭಾಗದ ಕಡೆ ಕಾಲಿಟ್ಟಾಗಿನ ಒಂದು ಘಟನೆಯನ್ನಾಧರಿಸಿದ ಕೃತಿ ಇದು. ಹೀಗಾಗಿ ಸಣ್ಣಾಟದ ಪ್ರಾರಂಭದ ಗುಣಲಕ್ಷಣಗಳನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಈ ಪ್ರಕಾರದಲ್ಲಿ ಸಾಮಾಜಿಕ ಸಂಗತಿ ಬಳಕೆಯಾದ ಅತ್ಯಂತ ಹಳೆಯ ಕಥೆ ಇದು ಎಂದು ತೋರುತ್ತದೆ.

ಇನ್ನೊಂದು ಇಂತಹದೇ ಮಹತ್ವದ ಕೃತಿ 'ರಾಧಾನಾಟ' (೧೯೮೪) ಎಂಬುದು. ಪ್ರಾರಂಭದಲ್ಲಿ ಮಹಾರಾಷ್ಟ್ರದ ತಮಾಷಾದ ಪ್ರಭಾವದಿಂದ ನಮ್ಮಲ್ಲಿ ಸಣ್ಣಾಟಗಳು ಪ್ರಾರಂಭವಾದವು ಎಂದು ಹೇಳುವಲ್ಲಿ ನಮಗೆ ದೊರೆಯುವ ಕೃತಿಗಳಲ್ಲಿ ಇದೂ ಒಂದು. ದಾಸರಾಟದ ನಂತರದ ಕೃತಿ ಈ 'ರಾಧಾನಾಟ'. ಈ 'ದಾಸರಾಟ' ಮತ್ತು ನಂತರ ಬೆಳೆದ ರಾಧಾನಾಟ ಇವೆಲ್ಲ ವೈದಿಕ ಸಂಸ್ಕೃತಿಗೆ ಸಂಬಂಧಿಸಿದ ಕಥೆಯ ಸೆರೆಗ್ಹಿಡಿದು ಬೆಳೆದು ಬಂದವುಗಳು.

ಇವುಗಳ ಸಾಲಿನಲ್ಲಿಯೇ 'ಸಂಗ್ಯಾಬಾಳ್ಯಾ' (೧೯೯೧) ಕೂಡ ಸೇರುವಂತಹದು. ವಿದ್ವಾಂಸರು ಈಗ ಭಾವಿಸಿರುವಂತೆ 'ಸಂಗ್ಯಾಬಾಳ್ಯಾ' ಸಣ್ಣಾಟವು ಡಪ್ಪಿನಾಟ ಪ್ರಕಾರ ಹೆಚ್ಚು ಪ್ರಸಿದ್ಧಿ ಹೊಂದಲು ಕಾರಣವಾದ ಒಂದು ಕೃತಿಯಾಗಿದೆ. ಹೀಗೆ ಸಣ್ಣಾಟದ ಬೆಳವಣಿಗೆಯ ಪ್ರಮುಖ ಹೆಜ್ಜೆಗುರುತುಗಳಾದ ಮೂರು ಸಣ್ಣಾಟದ ಕೃತಿಗಳನ್ನು ಡಾ। ಲಠ್ಠೆ ಅವರು ಶೋಧಿಸಿ ಪ್ರಕಟಿಸಿರುವುದು ಉಲ್ಲೇಖನಾರ್ಹ ಸಂಗತಿಯಾಗಿದೆ.

'ಯಯಾತಿ'(೧೯೮೭), 'ಪ್ರೇಮಿಲಿ ಬಭ್ರುವಾಹನ'(೧೯೮೪) 'ಚಿತ್ರಕೇತು' (೧೯೮೪) ಇವು ಮೂರು ಪೌರಾಣಿಕ ಕಥೆಗಳನ್ನು ಹೊಂದಿದ ದೊಡ್ಡಾಟ ಕೃತಿಗಳಾಗಿವೆ. ಮೊದಲಿನವೆರಡು ಮಹಾಭಾರತ ಕಥೆಯಲ್ಲಿನ ಘಟನೆಗಳನ್ನು ಆಧರಿಸಿದರೆ, ಕೊನೆಯದು ಭಾಗವತದಿಂದ ಆಯ್ದ ಕಥೆಯಾಗಿದೆ. ಇನ್ನುಳಿದ ನಾಲ್ಕು ಕೃತಿಗಳು ಧರ್ಮದೇವತೆ (೧೯೮೧), ಭೂಕೈಲಾಸ ಮತ್ತು ಚಂದ್ರ ಶಿರೋಮಣಿ (೧೯೮೩), ಚಿತ್ರಸೇನ (ಶಿಲ್ಲಪ್ಪ ಕವಿಯ ಬದುಕು-ಬರಹ, ೧೯೮೭) ಇವು ಸಣ್ಣಾಟದ ಕೃತಿಗಳಾಗಿವೆ. ಈ ನಾಲ್ಕೂ ಸಣ್ಣಾಟಗಳು ಪೌರಾಣಿಕ ವಸ್ತುವನ್ನೊಳಗೊಂಡೂ ಪ್ರೀತಿ, ಪ್ರೇಮ, ಪಾತಿವ್ರತ್ಯ ಇಂತಹ ಸಂಗತಿಗಳಿಗೆ ಸಂಬಂಧಪಟ್ಟ ವಸ್ತುವನ್ನು ಹೊಂದಿವೆ ಎಂಬುದು ಗಮನಾರ್ಹ ಸಂಗತಿ.

**ಜೀವನ ಚರಿತ್ರೆಗಳೆಂಬ ಚಾರಿತ್ರಿಕ ರಚನೆಗಳು :** ಡಾ। ಲಠ್ಠೆ ಅವರಿಗೆ ಪ್ರಿಯವಾದ ವಿಷಯಗಳು ಎರಡು. ಒಂದನೆಯದು- ಶರಣಸಾಹಿತ್ಯ, ಮತ್ತು ಜನಪದ ಸಾಹಿತ್ಯ, ಎರಡನೆಯದು- ಅಪರೂಪವಾಗಿ ಕಾಣುವ ವ್ಯಕ್ತಿತ್ವಗಳು. ಹೀಗಾಗಿ ಸಾಹಿತ್ಯದಂತೆ ಜೀವನ ಚರಿತ್ರೆಗಳನ್ನು ದಾಖಲಿಸುವಂತಹ ಕೆಲಸವನ್ನು ಡಾ। ಲಠ್ಠೆ ಅವರು ಮಾಡಿದರು.

ಡಾ। ಲಠ್ಠೆ ಅವರಿಗೆ ಜೀವನ ಚರಿತ್ರೆಗಳನ್ನು ಬರೆಯುವುದು ಅತ್ಯಂತ ಖುಷಿಯ ಸಂಗತಿ. ಅಂತಲೇ ಅವರು ಜನಪದ ಕವಿಗಳ ಚರಿತ್ರೆಗಳನ್ನು ಅಷ್ಟೊಂದು ಆಸಕ್ತಿಯಿಂದ ಬರೆದರೆಂದು ತೋರುತ್ತದೆ.

**ಶರಣಸಾಹಿತ್ಯ ಮತ್ತು ಶರಣರ ಜೀವನ ಚರಿತ್ರೆಗಳು :** ಡಾ। ಲಠ್ಠೆ ಅವರಿಗೆ ಅತ್ಯಂತ ಪ್ರಿಯ ವಿಷಯಗಳಲ್ಲಿ ಒಂದು ಶರಣರು ಮತ್ತು ಶರಣ ಸಾಹಿತ್ಯ. ಅವರು ತಮ್ಮ ಪಿಎಚ್.ಡಿ.ಗಾಗಿ ಆಯ್ದುಕೊಂಡ ವಿಷಯವೇ **'ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ'**. ಶರಣರ ಬಗೆಗೆ ಅಪಾರವಾದ ಆಸಕ್ತಿ ಇಟ್ಟುಕೊಂಡ ಡಾ। ಲಠ್ಠೆ ಅವರು ಶರಣರ ವಿಚಾರಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡವರು. ಹಾಗೆ ಬದುಕಲು ಪ್ರಯತ್ನಿಸಿದವರು.

ಶರಣರನ್ನು ಕುರಿತು ಅವರು ಬರೆದದ್ದು ಕಡಿಮೆ. ಆದರೆ ಜೀವಮಾನವಿಡೀ ಪ್ರಚಾರಕಾರ್ಯ ಮಾಡಿದ್ದು ಅಧಿಕವಾಗಿದೆ.

**ಸೃಜನಶೀಲ ಬರವಣಿಗೆ :** ಡಾ। ಲಠ್ಠೆ ಅವರು ಮೊದಮೊದಲಿಗೆ ಬರೆದದ್ದು ನಾಟಕಗಳನ್ನು. ೧೯೭೪ರಲ್ಲಿ ಜನಪದ ಸಾಹಿತ್ಯದ ತಮ್ಮ ಮೂರು ಸಂಗ್ರಹಗಳ ಜೊತೆ ಪ್ರಕಟಿಸಿದ ಒಂದು ಕೃತಿ **'ಮೂರು ಏಕಾಂಕ ನಾಟಕಗಳು'** (೧೯೭೪) ಎಂಬುದು. ಇದರಲ್ಲಿ ಅಕ್ಕಮಹಾದೇವಿ, ಬಿಜ್ಜಮಹಾದೇವಿ ಮತ್ತು ಕಾರಿಕಾಲಮ್ಮ ಇವರಿಗೆ ಸಂಬಂಧಿಸಿದ ಮೂರು ಏಕಾಂಕಗಳಿವೆ. ಇವೆಲ್ಲ ಮಕ್ಕಳಿಗಾಗಿ ತಯಾರಿಸಿದ ನಾಟಕಗಳೆಂದು ತೋರುತ್ತದೆ. ಅವರ ಇನ್ನೊಂದು ಕೃತಿ **'ಕನ್ನಡ ಯಾತ್ರೆ' (೧೯೮೦)** ಎಂಬುದು ಕೂಡ ರೇಡಿಯೋ ರೂಪಕಗಳ ಸಂಗ್ರಹ. ಶ್ರೀ ಶರಣಬಸವೇಶ್ವರ, ಕನ್ನಡ ಗಂಧ-ಗಾಳಿ, ಸಾರಥಿ, ಕನ್ನಡ ಯಾತ್ರೆ- ಈ ನಾಲ್ಕು ರೂಪಕಗಳು ಇದರಲ್ಲಿ ಇವೆ. ಇವೆಲ್ಲ ಕಲಬುರ್ಗಿಯಲ್ಲಿ ಬರೆದ ರೂಪಕಗಳಾಗಿವೆ.

**ನಿರಂತರ ಬರವಣಿಗೆ :** ಡಾ। ಲಠ್ಠೆ ಅವರು ಸುಮ್ಮನೆ ಕುಳಿತರೂ ಅವರು ಹಚ್ಚಿಕೊಂಡ ಜನರು ಅವರನ್ನು ನಿರಂತರವಾಗಿ ಸಾಹಿತ್ಯದ ಕೆಲಸದಲ್ಲಿ ತೊಡಗಿರುವಂತೆ ಮಾಡಿದರು. ಬಸವರಾಜ ಪಾಟೀಲ ಸೇಡಂ ಅವರು ಒಂದುನೂರು ಆಯ್ದವ್ಯಕ್ತಿತ್ವಗಳ ಚರಿತ್ರೆಗಳನ್ನು ಸಂಪಾದಿಸಿ ಕೊಡುವ ಜವಾಬ್ದಾರಿಯನ್ನು ಡಾ। ಲಠ್ಠೆ ಅವರಿಗೆ ವಹಿಸಿದ್ದರು. ಈಗಾಗಲೇ ಸುಮಾರು ೫೦ ಕೃತಿಗಳು ಪ್ರಕಟವಾಗಿದ್ದವು. ಮೂರನೆಯ ಕಂತಾಗಿ ಮತ್ತೆ ೨೫ ಕೃತಿಗಳನ್ನು ಮುದ್ರಣಕ್ಕೆ ಕೊಡಲು ತಯಾರಿಸಿದ್ದರು. ಅವರು ನಿಧನರಾದ ದಿನ ನಸುಕಿನಲ್ಲಿ ಎದ್ದು, ಕೂಡಲೆ ಒಂದು ಬರಹವನ್ನು ಪ್ರೆಸ್ಸಿಗೆ ಕಳಿಸಬೇಕಾಗಿದೆ ಎಂದು ಬರೆದು ಮುಗಿಸಿದ್ದರು. ಮುಂಜಾನೆ ವಿಚಾರಸಂಕಿರಣ ಒಂದರಲ್ಲಿ ಭಾಗವಹಿಸಲು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಬಂದು ಇಹಲೋಕ ಯಾತ್ರೆಯನ್ನು ಮುಗಿಸಿದರು. (೧೯.೧೧.೨೦೦೭). ಹೀಗೆ ನಿರಂತರವಾಗಿ ಕಲಬುರ್ಗಿಯಲ್ಲಿಯ ೩೫ ವರ್ಷಗಳನ್ನು ಓದುತ್ತ, ಬರೆಯುತ್ತ, ಈ ನಾಡಿನ ಸಂಸ್ಕೃತಿಯ ಎಚ್ಚರವನ್ನು ಸಾಮಾನ್ಯರಲ್ಲಿ ಬಿತ್ತುತ್ತ ಸವೆದುಹೋದರು.

* * *

ಮುತನಾಳ ಶಿವಪ್ಪ ಲಠ್ಠೆಯವರು ಉತ್ತರ ಕರ್ನಾಟಕದ ಸುಪ್ರಸಿದ್ಧ ಜಾನಪದ ವಿದ್ವಾಂಸರಲ್ಲಿ ಅಗ್ರಗಣ್ಯರು. ಜನಪದ ಕವಿಚರಿತ್ರೆ, ತತ್ವಪದ, ಬಯಲಾಟ, ಭಾಷಿಕ ಜಾನಪದದಲ್ಲಿ ಅವರದು ದೊಡ್ಡಕೊಡುಗೆ. ಜನಪದ ಕಾವ್ಯ ಶೋಧನೆಯ ಜೊತೆಗೆ ಜನಪದ ಕಾವ್ಯ ನಿರೂಪಕರ ಚರಿತ್ರೆ ಶೋಧನೆಗೆ ಆಸಕ್ತಿ ತೋರಿದ್ದು ಅವರ ವಿಶೇಷ. ವ್ಯಾಪಕವಾಗಿ ಕ್ಷೇತ್ರಕಾರ್ಯಮಾಡಿ ಅಪರೂಪದ ಹಾಡು, ಹಾಡುಗಾರರನ್ನು ಪರಿಚಯಿಸಿ ಕನ್ನಡ ಜನಪದ ಕ್ಷೇತ್ರವನ್ನು ಶ್ರೀಮಂತ ಗೊಳಿಸಿದರು; ಕನ್ನಡ ಜನಪದ ಅಧ್ಯಯನ ಪರಿಧಿಯನ್ನು ವಿಸ್ತರಿಸಿದರು. ಸೃಜನಶೀಲ ಸಾಹಿತಿಯೂ ಆದ ಸಜ್ಜನ ಸಂಭಾವಿತ ವಿದ್ವಾಂಸ ಡಾ. ಲಠ್ಠೆಯವರು ಜೀವನ ಪರ್ಯಂತ ಸಾಹಿತ್ಯ ಸಂಸ್ಕೃತಿ ಅನಾವರಣಕಾರರಾಗಿ ಸೇವೆ ಸಲ್ಲಿಸಿದರು.

ಕನ್ನಡದ ಜನಪ್ರಿಯ ವಿದ್ವಾಂಸರಾದ ಡಾ. ವೀರಣ್ಣ ದಂಡೆಯವರು ಡಾ. ಲಠ್ಠೆಯವರ ಬದುಕು ಸಾಧನೆಯನ್ನು ಯಥಾವತ್ತಾಗಿ ವರ್ಣಿಸಿದ್ದಾರೆ.

**ಪ್ರೊ. ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**

ಬೆಂಗಳೂರು